ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ನವೆಂಬರ್-೨೦೦೨ ಸಂಚಿಕೆ-೪



ನೊಬೆಲ್ ಶಾಂತಿ ಪ್ರಶಸ್ತಿ

ಆಧುನಿಕ ಜೀವನ ಶೈಲಿಗೊಂದು

ವ್ಯಂಗ್ಯೋಕ್ತಿ

ಜನಪದ ವಿಚಾರದಲ್ಲಿ

ನವೆಂಬರ್-೨೦೦೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ನವೆಂಬರ್-೨೦೦೭
ಸಂಪುಟ-೮
ಸಂಚಿಕೆ-೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೮೭೫೪
e-mail - janapada@yahoo.com

ಆಲಿಸಿದ್ದು ಏನನ್ನು? ಕಂಡಿದ್ದು ಏನನ್ನು!!

ಎಲ್ಲವನ್ನೂ ಆಲಿಸಬಲ್ಲೆವೆಂದು
ಎಲ್ಲವನ್ನೂ ಕಾಣಬಲ್ಲೆವೆಂದು
ಬಹಳ ಮಂದಿ ಹೇಳುತ್ತಿರುತ್ತಾರೆ ಆದರೆ
ಅವರು ಆಲಿಸುತ್ತಿರುವಂಥವು
ಅವರು ಕಾಣುತ್ತಿರುವಂಥವು ಬಹು ಕಡಿಮೆ.

ಅವರು ಆಲಿಸಲಾಗದಂಥವು
ಅವರು ಕಾಣಲಾಗದಂಥವು
ಬಹಳ ಬಹಳ ಹೆಚ್ಚು.

ಮಬ್ಬು ನೀರಾಗಿ ಜಾರುವಾಗ
ಮಳೆಹನಿಯೊಂದು ಹಾಕುವ ಕೇಕೆಯನ್ನು
ಎಂದಾದರೂ ಆಲಿಸಿದ್ದೀರಾ?

ಹೋಗಲಿ ಕಪ್ಪುಕತ್ತಲೆಯ ನಡುವೆ
ಮಿಣಿ ಮಿಣಿ ಎನ್ನುತ್ತಾ ಬೆಳಗುವ
ಕಿರು ಹಣತೆಯ ಎದೆಯ
ಸಪ್ಪಳವನ್ನಾದರೂ ಆಲಿಸಿದ್ದೀರಾ?

ಕವಿತೆಯ ಭಾರವನ್ನು ಹೊರಲಾರದೆ,
ಅತ್ತಿತ್ತ ಓಲಾಡುವ
ಶಬ್ದ ಸುಂದರಿಯ ಚಲನೆಯನ್ನು ಕಂಡಿದ್ದೀರಾ?

ಅನಾಥರ ಸೇವೆಗಾಗಿಯೇ ಮುಡಿಪಾಗಿರುವ,
ಒಬ್ಬ ಕರುಣಾಳುವನ್ನು ಚಿತ್ರಿಸುತ್ತಿರುವ,
ಚಿತ್ರಗಾರನ ಕುಂಚ ಆನಂದದಿಂದ
ಉಬ್ಬಿ ಹೋಗುವುದನ್ನಾದರೂ ಕಂಡಿದ್ದೀರಾ?

ಮತ್ತೆ ಆಲಿಸಿದ್ದು ಏನನ್ನು? ಕಂಡಿದ್ದು ಏನನ್ನು??

- ಡಾ|| ರಾವೂರಿ ಭಾರದ್ವಾಜ

ವಿಚಾರ ದೀಪ್ತಿ

ಪಂಡಿತ್ ಜವಾಹರ್‌ಲಾಲ್ ನೆಹರೂ ನ್ಯಾಯೋಚಿತವಾಗಿಯೆ ಜನತೆಯ ಆಯ್ಕೆ. ಆತನ ಭಾಷಣ ಸಂಕ್ಷಿಪ್ತ, ಚುರುಕು ಮತ್ತು ಧೀರತೆಯದು. ಕಲ್ಪನೆಯಲ್ಲಿ ಅತಿಯಾದುದಾದರೂ ವ್ಯಕ್ತವ್ಯದಲ್ಲಿ ಸಾಧುವಾದುದು. ರಾಗರಹಿತವಾಗಿ ವಿಷಯಗಳನ್ನು ನೋಡುವಂಥ ವ್ಯಕ್ತಿ ಆತ ಎಂದು ನೋಡುವುದಕ್ಕೆ ಆತನ ಭಾಷಣ ಸಂಪೂರ್ಣವಾಗಿ ಸಾಕ್ಷಿಯಾಗಿತ್ತು. ಸಿದ್ಧ ಸಮಾಜವಾದಿ. ದೇಶ ಯಾವುದನ್ನು ನಿರ್ವಹಿಸಬಲ್ಲದೊ ಅದು ಮಾತ್ರ ತನ್ನ ದೇಶಕ್ಕೆ ಬೇಕೆಂದು ಬಯಸಿದಂಥವನು. ಆತ ವ್ಯವಹಾರ ಕುಶಲಿ, ರಾಜನೀತಿಜ್ಞ, ತನ್ನ ಪರಿಸರಕ್ಕೆ ಯುಕ್ತವಾದ ರೀತಿಯಲ್ಲಿ ತನ್ನ ವಿಚಾರಗಳನ್ನು ಹೊಂದಿಸಿಕೊಳ್ಳಲು ಸಮರ್ಥ. ಆದರೆ ತನ್ನಮಟ್ಟಿಗೆ ಆತನೊಬ್ಬ ಆದರ್ಶವಾದಿ. ಆ ಆದರ್ಶಗಳಿಗಾಗಿ ಸದಾ ಹೋರಾಟ ನಡೆಸುವಂಥವ.

ತನ್ನ ಭಾಷಣದಲ್ಲಿ ಹೇಗೊ ಅಧ್ಯಕ್ಷತೆಯನ್ನು ನಿರ್ವಹಿಸುವಾಗಲೂ ಅಂತೆಯೆ ಇದ್ದವನು. ಆತ ಕಠಿಣನಾಗಿದ್ದ. ಆದಾಗ್ಯೂ ಸಹಕರಿಸುವಂಥವನು. ಅನೇಕ ಮುಜಗರದ ಪರಿಸ್ಥಿತಿಯಲ್ಲಿ ಆತನ ಹಾಸ್ಯಪ್ರವೃತಿ ಆತನಿಗೆ ನೆರವಾಯಿತು.

ಕೃತಿಯೇ ಮುಖ್ಯವೆಂದೆನಿಸಿದಾಗ ಆತ ಎಂದೂ ಹಿಂಜರಿಯಲಿಲ್ಲ. ಆತನ ದಣಿವರಿಯದ ಉತ್ಸಾಹ ಮತ್ತು ತನ್ನನ್ನೆ ತಾನು ಮರೆಯುವಿಕೆ, ಸಹಜ ಸರಳತೆ ಮತ್ತು ಎಲ್ಲರೊಂದಿಗಿನ ಸ್ನೇಹಭಾವ ಸಕಲರನ್ನು ಸಂಮೋಹಿತಗೊಳಿಸಿತು. ನ್ಯಾಯೋಚಿತವಾದುದನ್ನು ಮಾಡಲು ಉತ್ಸುಕವಾಗಿರುವ ಯಾವ ಸರ್ಕಾರವೂ ಜವಹರಲಾಲ ನೆಹರುರವರ ಬಗ್ಗೆ ಭಯಪಡುವ ಕಾರಣವಿಲ್ಲ. ದುಷ್ಟ ಸರ್ಕಾರಕ್ಕೆ ಓರ್ವ ಯೋಧನ ಬಲವಂತೂ ಗೊತ್ತಾಗುತ್ತದೆ. ತನ್ನ ದೇಶವನ್ನು ದುಷ್ಟ ಆಡಳಿತದಿಂದ ಬಿಡುಗಡೆಮಾಡಲು ಯಾವ ಬಲಿದಾನವೂ ಅತನಿಗೆ ಮಹತ್ತೆನಿಸುವುದಿಲ್ಲ.

ದೇಶದ ಯುವ ಜನಾಂಗ ತಮ್ಮ ಈ ಪ್ರತಿನಿಧಿಯ ಬಗ್ಗೆ ಅಭಿಮಾನಪಡಲು ಎಲ್ಲ ಸಕಾರಣವೂ ಇದೆ. ಜವಾಹರಲಾಲ್ ನೆಹರು ಓರ್ವ ಉದಾತ್ತ ಮತ್ತು ಸುಪುತ್ರನೆಂದು ಭಾವಿಸುವುದರಲ್ಲಿ ದೇಶ ಸಂತೋಷಿಸುವುದು. ದೇವರ ಆಶೀರ್ವಾದಗಳು ಆತನಿಗೆ ಸಿಗಲಿ ಮತ್ತು ಜವಾಹರಲಾಲ್‌ನ ಸೇವಾ ವರ್ಷದಲ್ಲಿ ದೇಶವು ತನ್ನ ಗುರಿಯನ್ನು ತಲುಪಲಿ.

– ಗಾಂಧಿ

(ಯಂಗ್ ಇಂಡಿಯಾ ಜನವರಿ ೯–೧೯೩೦)

ನೊಬೆಲ್ ಪ್ರಶಸ್ತಿ
ಆಧುನಿಕ ಜೀವನ ಶೈಲಿಗೊಂದು ವ್ಯಂಗ್ಯೋಕ್ತಿ!

- ಸುರೇಂದ್ರ ಕೌಲಗಿ

ಭೂಮಿಯ ಮೇಲೆ ತುರ್ತು ಪರಿಸ್ಥಿತಿ ಬಂದಿದೆ! ಈ ಮಾತನ್ನು ಹೇಳಿದವರು ಮಹತ್ಮಾ ಗಾಂಧೀಯಲ್ಲ. ೧೩೦ಕ್ಕೂ ಹೆಚ್ಚು ದೇಶದ ಮೂರು ಸಾವಿರಕ್ಕೂ ಹೆಚ್ಚು ಹವಾಮಾನ ತಜ್ಞರು, ಸಾಗರ ವಿಜ್ಞಾನಿಗಳು ಹಾಗೂ ಆರ್ಥಿಕ ತಜ್ಞರು ಆರು ವರ್ಷಗಳಿಂದ ಅಧ್ಯಯನ ನಡೆಸಿಕೊಟ್ಟ ಹೇಳಿಕೆ ಇದು. ಇದು ಸಾಲದೆಂಬಂತೆ ಈ ಅಧ್ಯಯನ ನಡೆಸಿದ್ದ ವಿಶ್ವಸಂಸ್ಥೆಯ ೧೩೦ ದೇಶಗಳ ಅಂತರ್ ಸರ್ಕಾರದ ಉನ್ನತ ನಾಗರೀಕ ಹವಾಮಾನ ಸಮಿತಿಗೆ ನೊಬೆಲ್ ಪ್ರಶಸ್ತಿಯ ಆರು ಕೋಟಿ ರೂಪಾಯಿಗಳ ಪೈಕಿ ಒಂದು ಪಾಲು ಅಂದರೆ, ಮೂರು ಕೋಟಿ ರೂಪಾಯಿಗಳ ನಗದು ಹಣವು ಸಂದಾಯವಾಗಿದೆ. ಇಷ್ಟು ಕರಾರುವಕ್ಕಾಗಿ ಮತ್ತು ಇಷ್ಟೊಂದು ಅಗಾಧ ಮೌಲ್ಯದ ತುರ್ತು ಪರಿಸ್ಥಿತಿಯ ಮಾತು ಸುಳ್ಳಾಗಿರಲು ಸಾಧ್ಯವೇ ಇಲ್ಲ. ಆದ್ದರಿಂದ ವಿಶ್ವಸಂಸ್ಥೆಯ ಹವಾಮಾನ ಕುರಿತ ಸಮಿತಿಯ (ಐ.ಪಿ.ಸಿ.ಸಿ) ಮಾತನ್ನು ಪ್ರಪಂಚದ ಆರುನೂರು ಕೋಟಿ ಜನ ಆ ಮಾತಿನ ಬಗ್ಗೆ ಯಾವುದೇ ಸಂದೇಹವನ್ನಾಗಲೀ, ಪ್ರಶ್ನೆಯನ್ನಾಗಲೀ ಎತ್ತದೆ ಒಪ್ಪಿಕೊಂಡಿದೆ. ಬಹುಷಃ ಇಂಥಾ ಒಂದು ಅದ್ಭುತವಾದ ಏಕಾಭಿಪ್ರಾಯ ಇನ್ನು ಬೇರೆ ಯಾವುದೇ ವಿಷಯದ ಬಗ್ಗೆ ಮೂಡಲಾರದು. ಅಂದರೆ ಇಂದಿನ ಎಲ್ಲ ಪ್ರಕಾರದ ರಾಜಕೀಯ ಸಮಸ್ಯೆಗಿಂತ, ಯಾವುದೇ ಪ್ರಕಾರದ ಅಭಿವೃದ್ಧಿ ಕಾರ್ಯಕ್ರಮಕ್ಕಿಂತ, ಯಾವುದೇ ವೈಜ್ಞಾನಿಕ ಸಂಶೋಧನೆಗಿಂತ, ಯಾವುದೇ ತಾಂತ್ರಿಕ ಸಾಧನೆಗಿಂತ, ಯಾವುದೇ ಯುದ್ಧಕ್ಕಿಂತ ಅತಿ ಹೆಚ್ಚಿನ ಮಹತ್ವದ ವಿಷಯ ಜಾಗತಿಕ ಹವಾಮಾನದಲ್ಲಿ ಉಂಟಾಗುತ್ತಿರುವ ವೈಪರಿತ್ಯದ ವಿಷಯವೆಂದು ಘಂಟಾಘೋಷವಾಗಿ ಸಿದ್ಧವಾಯಿತು. ಅಲ್ಲದೆ ಹವಾಮಾನದಲ್ಲಿ ಉಂಟಾಗುತ್ತಿರುವ ವೈಪರಿತ್ಯಗಳು ನಿಸರ್ಗದಲ್ಲಿ ನಡೆಯುವ ಸಹಜ ಪ್ರಕ್ರಿಯೆಗಳೆಂದು ಭಾವಿಸಲಾಗಿದ್ದುದು ತಪ್ಪೆಂದೂ, ಆ ವೈಪರಿತ್ಯಗಳು ಮಾನವ ನಿರ್ಮಿತವೆಂದೂ ಘೋಷಿಸಲಾಗಿದೆ. ಅಮೆರಿಕದ ಅಧ್ಯಕ್ಷ ಬುಷ್ ಮಹಾಶಯ ನಿನ್ನೆಯವರೆಗೂ ಈ ಮಾತನ್ನು ಒಪ್ಪಲು ಸಿದ್ಧವಿರಲಿಲ್ಲ. ಎಲ್ಲವೂ ಪ್ರಕೃತಿಯ ತಪ್ಪೆಂದು ಹೇಳುತ್ತಾ ಪರಿಸರದ ನಾಶಕ್ಕೆ, ಹವಾಮಾನದಲ್ಲಿಯ ವೈಪರಿತ್ಯಕ್ಕೆ, ತಾಪಮಾನದ ಹೆಚ್ಚಳಕ್ಕೆ ನಿಜವಾಗಿಯೂ ತಪ್ಪಿತಸ್ಥವಾಗಿರುವ ಅಭಿವೃದ್ಧಿ ಹೊಂದಿದ ಶ್ರೀಮಂತ ರಾಷ್ಟ್ರಗಳ ದುಂದುಗಾರಿಕೆಯ ಮೇಲೆ ಸಭ್ಯತೆಯ ಮುಸುಕನ್ನು ಹೊದಿಸಲು ಪ್ರಯತ್ನ ಮಾಡುತ್ತಿದ್ದ. ಅಮೆರಿಕಾ ಮತ್ತು ಇತರ ಶ್ರೀಮಂತ ದೇಶಗಳು ಈಗ ನೊಬೆಲ್ ಶಾಂತಿ ಪುರಸ್ಕಾರವು ಹವಾಮಾನ ಅಧ್ಯಯನ ಸಮಿತಿಗೆ ದೊರೆತ

ಮೇಲೆ ಪ್ರಪಂಚದ ಬಡಜನತೆಯ ಎದಿರು ಭೂಮಿ ಎಂಬ ವೇದಿಕೆಯ ಮೇಲೆ ಬೆತ್ತಲಾಗಿ ನಿಂತಿವೆ. ತಮ್ಮ ಮರ್ಯಾದೆ ಮುಚ್ಚಿಕೊಳ್ಳಲು ಒಂದು ತುಂಡು ಬಟ್ಟೆಯೂ ಸಿಗದಂಥ ಸಂದಿಗ್ಧ ಸ್ಥಿತಿಗೆ ಸಿಲುಕಿಕೊಂಡಿವೆ. ಮನುಷ್ಯನು ಭೂಮಿಯ ಮೇಲೆ ಕಾಣಿಸಿಕೊಂಡು ಇನ್ನೂರು-ಮುನ್ನೂರು ದಶಲಕ್ಷ ವರ್ಷಗಳೇ ಕಳೆದಿವೆ. ಅಂದಿನಿಂದ ಇಂದಿನವರೆಗೆ ಜಾಗತಿಕ ಹವಾಮಾನವು ಭೂಮಿಯ ಮೇಲಿನ ಸಮಸ್ತ ಜೀವರಾಶಿಗೆ, ಪ್ರಕೃತಿ ಸಂಪದಕ್ಕೆ ಸ್ನೇಹಮಯಿಯಾಗಿತ್ತು. ಆದರೆ ಕಳೆದ ನಲವತ್ತು ವರ್ಷಗಳಿಂದ ಪ್ರಪಂಚದಾದ್ಯಂತ ಪ್ರಾರಂಭವಾದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸೂಕ್ಷ್ಮವಾದ ಜೀವ ಪರಿಸರಕ್ಕೆ ತುಂಬಲಾಗದಷ್ಟು ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಈ ಮಾತನ್ನು ಹೇಳಿದವರು 'ಭೂಮಿಯ ಬಗ್ಗೆ ವರದಿ' (ದ ಅರ್ಥ್ ರಿಪೋರ್ಟ್) ಎಂಬ ಪುಸ್ತಕದ ಸಂಪಾದಕರಾದ ಎಡ್ವರ್ಡ್ ಗೋಲ್ಡ್ ಸ್ಮಿತ್. ಆ ಪುಸ್ತಕದ ತಮ್ಮ ಮುನ್ನುಡಿಯ ಕೊನೆಯಲ್ಲಿ ಆ ರೀತಿ ಅಭಿಪ್ರಾಯ ಪಟ್ಟಿದ್ದಾರೆ. ಆ ವರದಿಯಲ್ಲಿ ಕಾಣಿಸಲಾದ ಎಲ್ಲ ಸಮಸ್ಯೆಗಳಿಗೆ ಮಾನವನ ಅಭಿವೃದ್ಧಿ ನೀತಿಗಳೇ ಕಾರಣವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮನುಷ್ಯನು ಪ್ರಕೃತಿಯ ವಿಷಯದಲ್ಲಿ ಅಧಿಕಪ್ರಸಂಗಿಯಾಗಿ ಜೀವನ ನಡೆಸುತ್ತಿದ್ದಾನೆ. ಪ್ರಕೃತಿಯ ಸೇವಕನಾಗಿರಬೇಕಾದ ಮನುಷ್ಯ ಅದರ ಮೇಲೆ ಸವಾರಿ ಮಾಡುತ್ತಿದ್ದಾನೆ. ತನ್ನ ಭೋಗಜೀವನದ ಅಟ್ಟಹಾಸದಲ್ಲಿ ಪ್ರಕೃತಿ ಮಾತೆಯ ಸೂಕ್ಷ್ಮ ಭಾವನೆಗಳನ್ನು ತಿಳಿದುಕೊಳ್ಳಲು ಅಸಮರ್ಥನಾಗಿದ್ದಾನೆ. ಆಕಾಶವನ್ನು ಸೀಳುತ್ತಿದ್ದಾನೆ, ಸಮುದ್ರದ ಹೊಟ್ಟೆಯನ್ನು ಬಗೆಯುತ್ತಿದ್ದಾನೆ, ಸೂಕ್ಷ್ಮವಾದ ಜೈವಿಕ ಆವರಣವನ್ನು ಅನೇಕ ಪ್ರಕಾರದ ವಿಷಮ ಅನಿಲಗಳಿಂದ ಹದಗೆಡಿಸುತ್ತಿದ್ದಾನೆ. ಈ ಮಾತನ್ನು ಹೇಳಿದವ ಸಾಮಾನ್ಯ ಪ್ರಜೆಯಲ್ಲ. ಪರಿಸರ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ಮಾಡಿರುವ ಡಾ. ಡೋನಾಲ್ಡ್ ಫೊರಸ್ಟರ್. ಅವರ ಪ್ರಕಾರ ಈಗ ನಾವು "ವಿಷಾನಿಲಗಳು, ಗಾಯಗಳು, ಅವ್ಯವಸ್ಥೆಗಳು ಮತ್ತು ಸಾವು ಇರುವಂಥ ಪರಿಸರವನ್ನು ನಿರ್ಮಿಸುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ ಮಾನವ ಸ್ವಭಾವದಲ್ಲಾಗಿರುವ ತೀವ್ರ ಬದಲಾವಣೆ. ಇದರ ಪರಿಣಾಮವಾಗಿ ನಾವು ಪ್ರಕೃತಿ ಸಹಜವಾದ ಸೌಂದರ್ಯ, ಆರೋಗ್ಯ ಮತ್ತು ವ್ಯವಸ್ಥೆಯಂಥ ವಿಷಯಗಳ ಬಗ್ಗೆ ಉದಾಸೀನರಾಗಿದ್ದೇವೆ." ಓರ್ವ ವಿಜ್ಞಾನಿ ಹೇಳಿರುವ ಈ ಮಾತು ಇಂದಿನ ಆಧುನಿಕ ನಾಗರೀಕತೆಗೆ ಹಿಡಿದ ಕನ್ನಡಿಯಾಗಿದೆ. ಭೂಮಿಯ ತಾಪಮಾನ ದಿನೇ ದಿನೇ ಹೆಚ್ಚುತ್ತಿದೆ. ತಾಪಮಾನ ಹೆಚ್ಚಾಗುವುದಕ್ಕೆ ಮನುಷ್ಯನ ಇಂದಿನ ಆಧುನಿಕ ಜೀವನ ಶೈಲಿಯೇ ಮುಖ್ಯವಾಗಿ ಕಾರಣವಾಗಿದೆ. ಆದರೆ ಮನುಷ್ಯನಿಗೆ ತನ್ನ ತಪ್ಪನ್ನು ಅರ್ಥಮಾಡಿಕೊಳ್ಳಲು ಮತ್ತು ವಿಚಾರ ಮಾಡಲು ಸಮಯವಿಲ್ಲವಾಗಿದೆ.

ಈಗ ಮನುಷ್ಯನು ಉಪಯೋಗಿಸುವ ಎಲ್ಲ ಪ್ರಕಾರದ ಉಪಯೋಗಿ ವಸ್ತುಗಳೇ ಹವಾಮಾನದಲ್ಲಿಯ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತಿರುವುದೇ

ಇಂದಿನ ದುರಂತವಾಗಿದೆ. ಯಾವ ವಿದ್ಯುತ್‌ಚ್ಛಕ್ತಿಗಾಗಿ ಮನುಷ್ಯನು ಹಾಹಾಕಾರ ಪಡುತ್ತಿದ್ದಾನೋ ಆ ವಿದ್ಯುತ್‌ಚ್ಛಕ್ತಿಯು ಉತ್ಪಾದನೆಯ ಮೂಲಗಳೇ ಹವಾಮಾನದಲ್ಲಿಯ ತಾಪಮಾನಕ್ಕೆ ಕಾರಣವಾಗಿದೆ. ವಿದ್ಯುತ್‌ಚ್ಛಕ್ತಿ ಉತ್ಪಾದನೆಗೆ ಸ್ಥಾಪಿಸಲಾಗುತ್ತಿರುವ ಅಣು ಸ್ಥಾವರಗಳು, ಕಲ್ಲಿದ್ದಲು ಆಧಾರಿತ ಸ್ಥಾವರಗಳು ತಾಪಮಾನದ ಹೆಚ್ಚಳಕ್ಕೆ ಬಹುವಾಗಿ ಕಾರಣವಾಗುತ್ತಿವೆ. ಈಗ ಮನುಷ್ಯನು ದಾಸನಾಗಿರುವ ದೂರದರ್ಶನ, ಮೊಬೈಲ್, ರೇಡಿಯೋ, ಕಂಪ್ಯೂಟರ್, ರೆಫ್ರಿಜರೇಟರ್, ಸ್ಕೂಟರ್, ಕಾರು, ವಿಮಾನ, ಇತ್ಯಾದಿಗಳೆಲ್ಲವೂ ಹವಾಮಾನದ ತಾಪಮಾನಕ್ಕೆ ಕಾರಣವಾಗಿವೆ. ಅಷ್ಟೇ ಅಲ್ಲ, ಅನ್ನಕ್ಕಾಗಿ ನಡೆಯುವ ಕೃಷಿಯೂ ಸಹ ಈ ವಿಷಯದಲ್ಲಿ ದೋಷಿಯಾಗಿದೆ. ಉಪಯೋಗಿಸಲಾಗುತ್ತಿರುವ ರಾಸಾಯನಿಕ ಗೊಬ್ಬರಗಳು, ಅತಿಯಾದ ನೀರು, ಭೂ ಸವಕಳಿ, ಅಂತರ್ಜಲದ ಅತಿಯಾದ ಉಪಯೋಗ ಇತ್ಯಾದಿ ಕ್ರಿಯೆಗಳೂ ಅಪರಾಧಿ ಸ್ಥಾನದಲ್ಲಿವೆ. ಕಾಡುಗಳ ನಾಶಕ್ಕೆ ಮನುಷ್ಯನೇ ಕಾರಣನಾಗಿದ್ದಾನೆ. ಅವನು ಧೂಮಪಾನ ಮಾಡಿ ಎಸೆದ ಒಂದು ಬೀಡಿಯ ತುಂಡು ನೂರಾರು ಎಕರೆ ಕಾಡನ್ನು ಸುಟ್ಟು ಹಾಕುತ್ತದೆ. ಅದರೊಂದಿಗೆ ಅನೇಕ ಜೀವಿಗಳನ್ನೂ ಸಹ. ವಿಶ್ವದ ೯೫ % ರಷ್ಟು ಕಾಡು ಮನುಷ್ಯನಿಂದಲೇ ಹಾಳಾಗುತ್ತಿದೆ ಎಂದು ವಿಶ್ವ ಸಂಸ್ಥೆಯ ಎಫ್.ಎ.ಓ ವರದಿ ತಿಳಿಸಿದೆ. ಪ್ರಪಂಚದಲ್ಲಿ ಒಂದಲ್ಲಾ ಒಂದು ಕಡೆ, ಒಂದಲ್ಲಾ ಒಂದು ದೇಶದಲ್ಲಿ ಕಾಡ್ಗಿಚ್ಚು ಉರಿಯುತ್ತಲೇ ಇರುತ್ತದೆ. ಮನುಷ್ಯ ಉದ್ದೇಶಿತ ಬೆಂಕಿಯಲ್ಲದೆ ಹವಾಮಾನದಲ್ಲಿ ಉಂಟಾಗುತ್ತಿರುವ ತಾಪಮಾನವೂ ಸಹ ಕಾಡಿಗೆ ಬೆಂಕಿ ಬೀಳಲು ಕಾರಣವಾಗುತ್ತಿದೆ. ಈ ಪ್ರಕಾರದ ಮಾನವನ ಅನೇಕ ಅಧಿಕಪ್ರಸಂಗತೆಯ ಕಾರಣದಿಂದ ಭೂಮಿಯನ್ನು ಸೂರ್ಯನ ವಿಕಿರಣಗಳಿಂದ ರಕ್ಷಿಸುತ್ತಿರುವ ಓಝೋನ್ ಪದರಿನಲ್ಲಿ ನೂರಾರು ಛಿದ್ರಗಳಾಗಿವೆ, ಆಗುತ್ತಿವೆ. ಈಗ ಆಗುತ್ತಿರುವ ನಷ್ಟವನ್ನು ತುಂಬುವುದು ಕಷ್ಟವಾಗುತ್ತಾ ಹೋಗುವುದು. ಈ ಸಂಬಂಧವಾಗಿ ವಿಶ್ವಸಂಸ್ಥೆಯ ಮಾಜಿ ಕಾರ್ಯದರ್ಶಿ ಕೋಫಿ ಅನ್ನಾನ್ ಹೀಗೆ ಹೇಳಿದ್ದಾರೆ, "ಹಸಿರು ಮನೆಯ ಅನಿಲಗಳ ಹೊರಹೊಮ್ಮುವಿಕೆಯನ್ನು ಈಗ ತಡೆಯಲು ಆಗುವ ಖರ್ಚು, ಮುಂದೆ ಆಗುವ ಪರಿಣಾಮಗಳನ್ನು ತಡೆಯಲು ಆಗುವ ಖರ್ಚಿಗಿಂತ ಕಡಿಮೆ. ಆದ್ದರಿಂದ ಯೋಗ್ಯ ಕೃತಿ ಕೈಗೊಳ್ಳಲು ನಮಗೆ ಸಾಧ್ಯವಿಲ್ಲ ಎಂದು ಯಾರೂ ಹೇಳದಿರಲಿ," ಅನ್ನಾನ್‌ರವರ ಈ ಮಾತಿನಿಂದ ಹವಾಮಾನದಲ್ಲಿಯ ತಾಪಮಾನದಲ್ಲಿಯ ಏರಿಕೆಯಲ್ಲಿ ಮಾನವನ ಕೃತ್ಯಗಳು ಎಷ್ಟು ಗಂಭೀರ ಸ್ವರೂಪದ್ದಾಗಿವೆ ಎಂದು ಗೊತ್ತಾಗುತ್ತದೆ.

ಕಳೆದ ಶತಮಾನದಲ್ಲಿ ಒಂದು ಡಿಗ್ರಿ ಫ್ಯಾರನ್ ಹೀಟ್‌ನಷ್ಟು ಉಷ್ಣತೆ ಹೆಚ್ಚಾಗುವುದಕ್ಕೆ ಕಾರಣ ಹವಾಮಾನದಲ್ಲಿ ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾಗಿದ್ದದ್ದು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾಗಲು ಕಾರಣ, ೧) ಇಂಧನ ಸ್ಥಾವರಗಳು ೨) ವಾಹನಗಳು ೩) ಸಾವಯವ ವಸ್ತುಗಳ ದಹನ

ಇವಲ್ಲದೆ ಡಿಜಟಲ್ ಪ್ರಸಾರವು ಜಗತ್ತಿನ ಉಷ್ಣತೆಯನ್ನು ಹೆಚ್ಚಿಸುತ್ತಿದೆ. ಅದು ಬಹು ದೊಡ್ಡ ಪ್ರಮಾಣದಲ್ಲಿ ಕಾರ್ಬನ್ ಡೈ ಆಕ್ಸೈಡನ್ನು ಗಾಳಿಯಲ್ಲಿ ಸೇರಿಸುತ್ತಿದೆ. ಡಿಜಿಟಲ್ ಸಾಧನಗಳ ಮಾಧ್ಯಮದ ಮೂಲಕ ಸುದ್ದಿ ಕೇಳುವವರು ಒಂದು ವರ್ಷಕ್ಕೆ ೧೯೦,೦೦೦ ಸಾವಿರ ಟನ್‌ಗಳಷ್ಟು ಕಾರ್ಬನ್ ಡೈ ಆಕ್ಸೈಡನ್ನು ಉತ್ಪಾದಿಸಲು ಕಾರಣವಾಗುತ್ತಾರೆ.

ಇರುವ ಒಂದೇ ಭೂಮಿಯನ್ನು ಹಾಳುಗೆಡವಿದ್ದು ಸಾಲದೆಂದು ಆಕಾಶವನ್ನು ಮಾನವ ಮಲಿನಗೊಳಿಸುತ್ತಿದ್ದಾನೆ. ದಿನವೂ ಆಕಾಶದಲ್ಲಿ ಪ್ರಪಂಚದಾದ್ಯಂತ ಹಾರಾಡುವ ಸಾವಿರಾರು ವಿಮಾನಗಳು ತಮ್ಮ ನಳಿಕೆಯ ಮೂಲಕ ಹೊರಬಿಡುವ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣ ಅಳತೆಗೆ ಸಿಗದಷ್ಟು ಆಗಿದೆ. ಆ ಕಾರಣದಿಂದಾಗಿ ಭೂಮಿಯ ಮೇಲೆ ಏನೇನು ದುಷ್ಪರಿಣಾಮಗಳಾಗುತ್ತಿವೆ ಎಂಬುದನ್ನು ತಿಳಿಯಲೂ ಸಾಧ್ಯವಾಗದಂಥ ಪರಿಸ್ಥಿತಿ ಉಂಟಾಗಿದೆ. ಸಮುದ್ರವನ್ನಂತೂ ಲೆಕ್ಕಕ್ಕೇ ಇಟ್ಟುಕೊಂಡಿಲ್ಲ. ಸಮುದ್ರದ ಪಾತಳಿಯಲ್ಲಿ ನೂರಾರು ಕಿಲೋ ಮೀಟರ್ ರಂಧ್ರ ಕೊರೆದು ಅಲ್ಲಿರುವ ಎಣ್ಣೆಯನ್ನು, ಅನಿಲವನ್ನೂ ತೆಗೆಯುತ್ತಿದ್ದೇವೆ. ಹೀಗೆ ಮಾಡುವಾಗ ಅಗಾಧ ಪ್ರಮಾಣದ ಹೊಗೆಯನ್ನು ಹವಾಮಾನಕ್ಕೆ ಸೇರಿಸುತ್ತಿದ್ದೇವೆ. ಈ ವಿಷಯ ಎಷ್ಟು ವಿಪರ್ಯಾಸದ್ದಾಗಿದೆ ಎಂಬುದಕ್ಕೆ ನೊಬೆಲ್ ಶಾಂತಿ ಪ್ರಶಸ್ತಿ ಪಡೆದಿರುವ ಅಲ್ ಗೋರ್‌ರ ಬಗ್ಗೆ ಒಂದು ಟೀಕೆ ಕೂಡ ಬಂತು. ಹವಾಮಾನದಲ್ಲಿ ಉಂಟಾಗುತ್ತಿರುವ ತಾಪಮಾನದ ವಿಷಯವನ್ನು ಕೈಗೆತ್ತಿಕೊಂಡು ಅದರ ವಿರುದ್ಧವಾಗಿ ಪ್ರಚಾರ ಮಾಡಹೊರಟ ಅಲ್ ಗೋರ್ ಜೆಟ್ ವಿಮಾನವನ್ನು ಉಪಯೋಗಿಸಿ ತಾವು ಪ್ರತಿಪಾದಿಸುತ್ತಿರುವ ತತ್ವಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆಂಬ ಟೀಕೆಗೆ ಒಳಗಾದರು!

ಪ್ರಪಂಚದ ಎಲ್ಲ ನದಿಗಳೂ ಕೈಗಾರಿಕಾ ತ್ಯಾಜ್ಯಗಳಿಂದ, ನಗರಗಳ ತ್ಯಾಜ್ಯದಿಂದ ಅತ್ಯಂತ ಕಲುಷಿತಗೊಂಡಿವೆ. ಆ ಕಲುಷಿತಗೊಂಡ ನೀರು ಸಮುದ್ರವನ್ನು ಸೇರುತ್ತಿದೆ. ಆಗಾಗ್ಗೆ ಹಡಗುಗಳು ಮುಳುಗಿ, ಆ ಹಡಗುಗಳಲ್ಲಿದ್ದ ತೈಲ ಸಮುದ್ರ ಸೇರಿ ಜಲಚರಗಳು ಸಾಯುವುದು ದಿನನಿತ್ಯದ ಸುದ್ದಿಯಾಗಿದೆ.

ಹವಮಾನದಲ್ಲಿಯ ತಾಪದಲ್ಲಿಯ ಹೆಚ್ಚಳಕ್ಕೆ ಮಾನವನ ಜೀವನ ಶೈಲಿ ಮುಖ್ಯ ಕಾರಣವಾಗಿದೆ ಎಂದು ಈಗ ಸಿದ್ಧವಾಗಿಹೋಯಿತು. ಮನುಷ್ಯನ ಮೇಲೆ ಈ ಆಪಾದನೆ ಬಂದಿದೆ. ಇದರ ವಿರುದ್ಧ ಅವನು ಯಾವ ಕೋರ್ಟಿನ ಮೊರೆಯೂ ಹೋಗುವಂತಿಲ್ಲ.

ಈಗ ಅವನು ಈ ಭೂಮಿಯಮೇಲೆ ಸುರಕ್ಷಿತವಾಗಿ ಜೀವಂತ ಇರಬೇಕಾದರೆ ಅದಕ್ಕೆ ಒಂದೇ ಒಂದು ಉಪಾಯ ಅವನು ತನ್ನ ಇಂದಿನ ಜೀವನ ಶೈಲಿಯನ್ನು ಆಮೂಲಾಗ್ರವಾಗಿ ಬದಲಾಯಿಸಿಕೊಳ್ಳಬೇಕು. "ಏಳು

ಪೀಳಿಗೆಗಳ ನಂತರವೂ ಮನುಕುಲ ಕ್ಷೇಮದಿಂದ ಇರಬೇಕಾದರೆ ಇಂದಿನ ನಮ್ಮ ವರ್ತನೆಗಳನ್ನು ಬದಲಿಸಿಕೊಳ್ಳಬೇಕಿದೆ" ಎಂದು ಗಾಂಧೀಜಿ ಹೇಳಿದ್ದ ಮಾತನ್ನು ಸ್ಮರಿಸಿಕೊಳ್ಳಬೇಕಿದೆ. ಅವರ ಇನ್ನೊಂದು ಪ್ರಮುಖವಾದ ಮಾತು, "ಪ್ರಕೃತಿ ಎಲ್ಲರ ಅವಶ್ಯಕತೆಗಳನ್ನು ಪೂರೈಸಬಲ್ಲದು. ಆದರೆ ಯಾರೊಬ್ಬರ ದುರಾಸೆಯನ್ನು ಪೂರೈಸಲಾರದು" ಎಂಬ ಮಾತನ್ನು ಸಹ ಪುನಃ ಪುನಃ ಜಪ ಮಾಡಬೇಕಿದೆ.

ಈಗ ಎಲ್ಲಕ್ಕಿಂತ ಮನುಷ್ಯ ಮಾಡಿರುವ ದೊಡ್ಡ ತಪ್ಪು, ಪ್ರಕೃತಿಯನ್ನು ಒಂದು ವಾಣಿಜ್ಯ ವಸ್ತುವನ್ನಾಗಿ ಪರಿವರ್ತಿಸಿದ್ದು. ಈ ಕ್ರಮದ ಬಗ್ಗೆ ಮನುಷ್ಯ ಆಲೋಚಿಸ ಬೇಕಿದೆ. ಇದನ್ನು ಅರ್ಥಮಾಡಿಕೊಂಡಿರುವ ಅಲ್ ಗೋರ್ ತಮ್ಮ 'ನಗ್ನ ಚಿತ್ರ' ಎಂಬ ಚಲನ ಚಿತ್ರದಲ್ಲಿ "ಹವಾಮಾನದಲ್ಲಿಯ ಬದಲಾವಣೆಯ ವಿಷಯ ರಾಜಕೀಯ ವಿಷಯಕ್ಕಿಂತ ನೈತಿಕ ಮತ್ತು ಆಧ್ಯಾತ್ಮಿಕ ಆಹ್ವಾನವಾಗಿದೆ" ಎಂಬ ಸಂದೇಶ ಸಾರಿದ್ದಾರೆ. ಅಲ್ಲದೆ, ಈಗ ಹವಾಮಾನದಲ್ಲಿ ಉಂಟಾಗಿರುವ ಗಂಡಾಂತರದ ಮೂಲಕ ಮಾನವ ತನ್ನ ಆತ್ಮ ಸಾಕ್ಷಿಯನ್ನು ಉನ್ನತ ಮಟ್ಟಕ್ಕೆ ಏರಿಸಬೇಕೆಂದು ಸಹ ಸಲಹೆ ಕೊಟ್ಟಿದ್ದಾರೆ. ಏಕೆಂದರೆ ಪ್ರಕೃತಿಯನ್ನು ನಮ್ಮ ರಾಜಕಾರಣ ಆಳುವಂತೆ ಮಾಡಿದರೆ, ನಾವು ನಾಶವಾಗುವುದು ಖಂಡಿತ ಎಂದು ಇನ್ನೋರ್ವ ವಿಜ್ಞಾನಿ ಜಾರ್ಜ್ ಮೊನ್ ಬಿಯೋಟ್ ಅಮೆರಿಕದ ಗಾರ್ಡಿಯನ್ ಪತ್ರಿಕೆಯಲ್ಲಿ ಬರೆದಿದ್ದಾರೆ. ಇವರ ಈ ಮಾತಿಗೆ ಉದಾಹರಣೆ ಗುಜರಾತಿನಲ್ಲಾದ ಭೂಕಂಪ. ಆಗ್ ಬೆನ್ ವೈಸನರ್ ಎಂಬ ಸಂಶೋಧಕ ಹೀಗೆ ಉದ್ಗಾರ ತೆಗೆದಿದ್ದಾನೆ. "ಭೂಕಂಪ ಈ ಜನರನ್ನು ಸಾಯಿಸಲಿಲ್ಲ. ಮಾನವನ ತಪ್ಪುಗಳು, ಬೇಜವಾಬ್ದಾರಿ, ಭ್ರಷ್ಟಾಚಾರ ಮತ್ತು ದುರಾಸೆ ಜನರನ್ನು ಕೊಂದಿತು." ವಿದ್ಯುತ್‌ಶಕ್ತಿ ಮತ್ತು ಶಸ್ತ್ರಾಸ್ತ್ರಗಳು ಬೇರೆ ಬೇರೆಯಾದ ಕಾರ್ಯಕ್ರಮಗಳು ಎಂದು ತಿಳಿಯುವುದು ಮೂರ್ಖತನ. ಅವು ಸಯಾಮಿ ಅವಳಿ ಮಕ್ಕಳು ಎಂಬುದಾಗಿ ಇಂಧನ ತಜ್ಞ ಪ್ರೊಫೆಸರ್ ಸುಜೋಯ್ ಬಸು ಹೇಳಿದ್ದಾರೆ.

ಕರ್ನಾಟಕದ ಪರಿಸರ ವಿಜ್ಞಾನಿ ನಾಗೇಶ ಹೆಗಡೆ 'ಇರುವುದೊಂದೇ ಭೂಮಿ' ಎಂದು ಹೇಳುವುದರ ಜೊತೆಗೆ 'ಭೂಮಿ ಒಂದು ದೊಡ್ಡ ಯಂತ್ರ, ಅದರ ರಿಪೇರಿಗೆ ಯಾವ ತಂತ್ರ' ಎಂಬ ಪ್ರಶ್ನೆಯನ್ನೂ ಕೇಳಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿಯನ್ನು ಆಲ್‌ಫ್ರೆಡ್ ನೊಬೆಲ್ ಸ್ಥಾಪಿಸಿದಾಗ ಅದರ ಅರ್ಥ ಪ್ರಪಂಚದಲ್ಲಿ ಯುದ್ಧವನ್ನೂ, ಯುದ್ಧಕ್ಕೆ ಕಾರಣವಾಗುವ ಪರಿಸ್ಥಿತಿಯನ್ನೂ ಕಡಿಮೆ ಮಾಡಬೇಕೆಂಬುದಾಗಿತ್ತು. ಆದರೆ ೨೦೦೭ ನೇ ಇಸವಿಯಲ್ಲಿ ಆ ಪ್ರಶಸ್ತಿಯನ್ನು ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಉಂಟಾಗುತ್ತಿರುವ ತಾಪಮಾನದ ಬಗ್ಗೆ ವಿಶ್ವದ ಜನರ ಗಮನ ಸೆಳೆಯುವ ಪ್ರಯತ್ನಕ್ಕಾಗಿ, ಅವರಲ್ಲಿ ಅರಿವು ಮೂಡಿಸುವ ಕೆಲಸಕ್ಕಾಗಿ ದೊರೆತದ್ದು ಪ್ರಪಂಚದಲ್ಲಿ ಭೀಕರ ಮೂರನೆ ಮಹಾಯುದ್ಧದಷ್ಟೇ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ಸಾರಿದಂತಾಗಿದೆ.

* * *

ವ್ರತ, ತ್ಯಾಗ, ಅದ್ವೈತ ಭಾವನೆಗಳ ಬಗ್ಗೆ ಗಾಂಧಿ ಮತ್ತು ಟಾಗೋರ್

– ಗುರುದಯಾಳ್ ಮಲ್ಲಿಕ್

ಜೀವನದ ಅರ್ಥಶಾಸ್ತ್ರದಲ್ಲಿ ವ್ರತಗಳಿಗಿರುವ ಸ್ಥಾನವು ಏನು? ಗಾಂಧೀಜಿ ಅವುಗಳಿಗೆ ಬಹಳ ಮಹತ್ವ ಕೊಟ್ಟಿದ್ದರು. ಯಾವಾತನೇ ಆಗಲಿ ತನ್ನ ನಿಜ ರೂಪವನ್ನು ತಿಳಿಯಬಯಸುವುದಾದರೆ ತನ್ನ ಸಹಜ ಪ್ರಚೋದನೆಗಳನ್ನೂ, ಹಸಿವುಗಳನ್ನೂ ಹೇಗೆ ನಿಯಂತ್ರಿಸಬೇಕೆಂಬುದನ್ನು ತಿಳಿದಿರಬೇಕಾಗುತ್ತದೆ. ಅದಕ್ಕೆ ವ್ರತಗಳು ನೆರವಾಗುತ್ತವೆ. ಯಾವ ರೀತಿ ನದಿಯ ತೀರಗಳು ನದಿಯ ಪ್ರವಾಹ ಹರಿಯಲು ಮತ್ತು ಅದನ್ನು ಸೀಮಿತವಾಗಿಡಲು ಸಹಾಯ ಮಾಡುತ್ತವೊ ಹಾಗೆ ವ್ರತಗಳು ಮನುಷ್ಯನಿಗೆ ಸಹಾಯ ಮಾಡುತ್ತವೆ. ಆ ನದಿಯ ರೂಪವನ್ನು ಕೊಂಚ ಬದಲಾಯಿಸಲು ಹಾಗು ಅದರ ಹರಿವಿಗೆ ಹೆಚ್ಚಿನ ಗತಿಯನ್ನು ತರಲು ಕಟ್ಟೆಗಳು ಅಗತ್ಯವಿರುವಂತೆ ಮನುಷ್ಯನ ಜೀವನಕ್ಕೆ ದಿಕ್ಕನ್ನೂ, ಆಳವಾದ ಗತಿಶೀಲತೆಯನ್ನೂ ನಿಶ್ಚಿತಗೊಳಿಸುವುದಕ್ಕಾಗಿ ವ್ರತಗಳು ಅಗತ್ಯವಾಗಿವೆ.

ರವೀಂದ್ರನಾಥ್ ಟಾಗೋರರು ಕೂಡ ವ್ರತಗಳ ಮಹತ್ವವನ್ನೂ, ಅವುಗಳ ಗುಣಾತ್ಮಕ ಪರಿಣಾಮವನ್ನೂ ನಂಬಿದ್ದರು. ಅವರು ಯಾವುದಾದರೊಂದು ಪ್ರತಿಜ್ಞೆ ಕೈಗೊಂಡರೆ ಅದನ್ನು ಕೊನೆಯವರೆಗೂ ಪಾಲಿಸುತ್ತಿದ್ದರು. ಉದಾಹರಣೆಗೆ ಅವರು ಬಾಲಕರಾಗಿದ್ದಾಗ ಅವರಿಗೆ ಯಜ್ಞೋಪವಿತವನ್ನು ಧಾರಣೆ ಮಾಡಿಸಲಾಗಿತ್ತು. ಬಾಲಬ್ರಹ್ಮಚಾರಿ ಹಗಲು ಹೊತ್ತಿನಲ್ಲಿ ಮಲಗುತ್ತಿದ್ದುದಕ್ಕಾಗಿ ಅವರನ್ನು ಗದರಿಸಲಾಗಿತ್ತು. ಅವರು ಆ ಪ್ರತಿಜ್ಞೆಗೆ ಎಷ್ಟೊಂದು ದೃಢವಾಗಿ ಅಂಟಿಕೊಂಡಿದ್ದರೆಂದರೆ ೧೯೪೦ ರಲ್ಲಿ ಗಾಂಧೀಜಿ ಶಾಂತಿನಿಕೇತನಕ್ಕೆ ಭೇಟಿಕೊಟ್ಟಾಗ ಗುರುದೇವರ ಆರೋಗ್ಯ ಕೆಡುತ್ತಿತ್ತು. ಆದ್ದರಿಂದ ಮಧ್ಯಾಹ್ನದ ಊಟದ ನಂತರ ಸ್ವಲ್ಪ ನಿದ್ರೆ ಮಾಡಬೇಕೆಂದು ಗಾಂಧೀಜಿ ಗುರುದೇವರನ್ನು ಬಹುವಾಗಿ ವಿನಂತಿಸಿಕೊಂಡರು. ಗುರುದೇವರು ತಾವು ಇಪ್ಪತ್ತು ವರ್ಷಗಳ ಹಿಂದೆ ಕೈಗೊಂಡಿದ್ದ ಪ್ರತಿಜ್ಞೆಯ ಬಗ್ಗೆ ತಿಳಿಸಿ ಹೇಳಿದರು. ಆಗ ಗಾಂಧೀಜಿ ಹೀಗೆ ಹೇಳಿದರು, "ಹಾಗಿದ್ದರೆ ನಾನು ಆ ಪ್ರತಿಜ್ಞೆಯನ್ನು ನೀವು ಮುರಿಯಿರೆಂದು ಹೇಳಲಾರೆ. ಆದರೆ ನಿಮ್ಮ ಆರೋಗ್ಯದ ಹಿತದೃಷ್ಟಿಯಿಂದ ಮಧ್ಯಾಹ್ನದ ಹೊತ್ತು ಕೊಂಚ ವಿಶ್ರಾಂತಿ ಪಡೆಯಿರೆಂದು ಶಿಫಾರಸು ಮಾಡುತ್ತೇನೆ."

ಗಾಂಧೀಜಿಯವರ ಆಶ್ರಮದ ನಿವಾಸಿಗಳು ಕೆಲ ವ್ರತಗಳನ್ನು ಕೈಗೊಳ್ಳಬೇಕಿತ್ತು. ಅವನ್ನು ಪಾಲಿಸುವುದು ಆಶ್ರಮವಾಸಿಗಳ ಕಡ್ಡಾಯ ಕರ್ತವ್ಯವಾಗಿತ್ತು. ಆದರೆ ಯಾರಾದರು ಎಂದಾದರು ಆ ವ್ರತಗಳನ್ನು ಭಂಗಗೊಳಿಸಿದರೆ, ಗಾಂಧೀಜಿಯವರ ಮನಸ್ಸಿಗೆ ತುಂಬಾ ನೋವಾಗುತ್ತಿತ್ತು. ಅಷ್ಟೇ ಅಲ್ಲ, ತೀವ್ರತಮವಾದ ಪಶ್ಚಾತ್ತಾಪಕ್ಕಾಗಿ ಅವರು ಉಪವಾಸವನ್ನೂ ಕೈಗೊಳ್ಳುತ್ತಿದ್ದರು. ಆದರೆ ಟಾಗೋರರು

ಯಾರಿಗೇ ಆಗಲಿ, ಯಾವುದೇ ನೈತಿಕ ಅಥವಾ ಆಧ್ಯಾತ್ಮಿಕ ಸಾಧನೆಗಾಗಿ ಯಾವುದೇ ವ್ರತ ಕೈಗೊಳ್ಳುವಂತೆ ಒತ್ತಾಯಿಸುತ್ತಿರಲಿಲ್ಲ. ಬದಲಿಗೆ ವ್ರತ ಕೈಗೊಳ್ಳುವ ಇಚ್ಛೆಯಿದ್ದಲ್ಲಿ ಅದನ್ನು ಸಂಪೂರ್ಣವಾಗಿ ಸ್ವಯಂ ಪ್ರೇರಣೆಯಿಂದ ತನ್ನ ಆತ್ಮ ಸಾಕ್ಷಿಗನುಗುಣವಾಗಿ ಕೈಗೊಳ್ಳಬೇಕೆಂಬುದನ್ನು ಅವರು ಇಷ್ಟಪಡುತ್ತಿದ್ದರು. ಒಂದು ವೇಳೆ ಅವನು ವ್ರತವನ್ನು ಮುರಿದರೆ ಅದನ್ನು ದ್ವಿಗುಣ ಶಕ್ತಿಯಿಂದ ಪಾಲಿಸಲು ಪ್ರಯತ್ನಿಸಬೇಕೆ ಹೊರತು ಯಾವುದೇ ಪ್ರಕಾರದ ಪಶ್ಚಾತ್ತಾಪಕ್ಕೆ ಕೈ ಹಾಕಬಾರದು. ಬದಲಿಗೆ ವ್ರತದ ಪಾಲನೆಯಲ್ಲಿ ಇನ್ನೂ ಹೆಚ್ಚು ಜಾಗ್ರತನಾಗಿರಬೇಕು ವ್ರತದ ಭಂಗದಿಂದ ತಾನೇನೋ ಭಯಂಕರವಾದ ಪಾಪ ಮಾಡಿದ್ದೇನೆಂಬ ವಿಚಾರದಿಂದಲೂ ಅಥವಾ ಜೀವನವೆಂಬುದು ದುಷ್ಟ ಪ್ರವೃತ್ತಿಯೊಂದಿಗಿನ ಹೋರಾಟವೆಂಬ ವಿಚಾರದಿಂದಲೂ ದೂರವಿರಬೇಕು ಎಂದು ಹೇಳುತ್ತಿದ್ದರು. ಗುರುದೇವರ ಈ ಪ್ರಕಾರದ ಚಿಂತನೆಗೆ ಕಾರಣ ಅವರು ಕವಿಯಾದುದರಿಂದ. ಬಹುಶಃ ಜೀವನವನ್ನು ಒಂದು ಗೀತೆ ಅಥವಾ ನೃತ್ಯವೆಂದೂ ಓರ್ವ ವ್ಯಕ್ತಿಯಲ್ಲಿಯ ಹಲವಾರು ಬಗೆಯ ಸಮೂಹ ವಾದ್ಯವೆಂದೂ ಅವರು ಭಾವಿಸಿದ್ದಿರಬಹುದು. ಆದ್ದರಿಂದ ಅಂಟಿಕೊಂಡಿರುವ ರಾಡಿಯಿಂದ ಸೂರ್ಯ ಪ್ರಕಾಶಕ್ಕೆ ಮತ್ತು ಸ್ವಚ್ಛಂದ ಗಾಳಿಗೆ ಹೊರಬಂದು ಕಮಲ ಬೆಳೆಯುವಂತೆ ಮನುಷ್ಯ ಬೆಳೆಯಬೇಕೆಂದು ಟಾಗೋರ್ ಹೇಳುತ್ತಿದ್ದರು.

ಇಲ್ಲಿ ಮುಖ್ಯವಾದ ವಿಷಯವೇನೆಂದರೆ ಸಾಧಕನು ಸ್ಪಷ್ಟವಾದ ಉದ್ದೇಶ್ಯ ಅಥವಾ ಗುರಿಯನ್ನು ತನ್ನ ಜೀವನದಲ್ಲಿ ಹೊಂದಿರಬೇಕು. ತದನಂತರ ಅದರ ಸಿದ್ಧಿಗಾಗಿ ಅವನಿಗನಿಸಿದ ಅಗತ್ಯಗನುಗುಣವಾಗಿ ಯಾವ ರೀತಿ ಓರ್ವಕಲಾಕಾರ ಒಂದು ವ್ಯಕ್ತಿಚಿತ್ರ ಬರೆಯುವಾಗ ತನ್ನ ಸ್ವ ಇಚ್ಛೆಯಂತೆ ಒಂದು ಪ್ರಮಾಣದ ಸ್ವನಿಯಂತ್ರಣ ಅನುಸರಿಸುತ್ತಾನೋ ಆ ರೀತಿ ಸ್ವಯಂ ನಿಯಂತ್ರಣ ಹಾಕಿಕೊಳ್ಳಬೇಕು.

ಹೀಗೊಂದು ಕಥೆಯಿದೆ. ಒಮ್ಮೆ ಸತ್ಯದ ಶೋಧಕ ಓರ್ವ ಮುನಿಯನ್ನು ಭೇಟಿ ಮಾಡಿದ. ಅವನನ್ನು ಕೇಳಿದ " ಭಗ್ವದ್ಗೀತೆಯಲ್ಲಿ ಶ್ರೀ ಕೃಷ್ಣ ಬೋಧನೆಯ ಸಾರವೇನು?" ಆ ಮುನಿ ಗೀತೆಯನ್ನು ಓದಿರಲಿಲ್ಲವಾದರೂ ಸ್ವಯಂ ಪ್ರೇರಣೆಯಿಂದ ನೇರವಾಗಿ ಹೀಗೆ ಉತ್ತರಿಸಿದ. "ಸ್ವ ಆತ್ಮದ ನಿರಾಕರಣೆ". ನಂತರ ಎಲ್ಲ ವಿನಯದೊಂದಿಗೆ ಮುಂದುವರಿಯುತ್ತಾ ಮುನಿ ಹೀಗೆ ಹೇಳಿದ, "ಕುರುಕ್ಷೇತ್ರದ ಯುದ್ಧ ಭೂಮಿಯಲ್ಲಿ ಎಷ್ಟೋ ವರ್ಷಗಳ ಹಿಂದೆ ಭಗವಂತ ಅರ್ಜುನನಿಗೆ ಏನನ್ನು ಬೋಧಿಸಿದನೋ ಅದರ ಸಾರವನ್ನು ನಾನು ತಿಳಿದಿದ್ದರೂ ಇನ್ನೂ ಅದನ್ನು ನನ್ನ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದೇನೆ."

ನಿಜವಾದ ಸಂಗತಿಯೇನೆಂದರೆ ಪ್ರತಿಯೊಂದು ಧರ್ಮದ ತಿರುಳು ತ್ಯಾಗದ ಮನೋಭಾವನೆಯನ್ನು ಹೊಂದಿರುವುದು ಮತ್ತು ಪ್ರಜ್ಞಾ ಪೂರ್ವಕವಾಗಿಯೂ, ಸತತವಾಗಿಯೂ ಭಗವಂತನ ಇಚ್ಛೆಗೆ ಶರಣಾಗುವುದು. ಮನುಷ್ಯನ ಸ್ವಭಾವ ಅವನನ್ನು ದೀರ್ಘಕಾಲ ದುಡಿಮೆ ಮತ್ತು ಸಂಗ್ರಹದ ದಾರಿಯಲ್ಲಿಯೇ ತೊಡಗಿಸುತ್ತದೆ. ಆದರೆ ಒಂದಿಲ್ಲ ಒಂದು ದಿನ ಅವನು ಪ್ರಾಪಂಚಿಕ ವ್ಯವಹಾರಗಳ ದಾರಿಯಿಂದ

ಹಿಮ್ಮುಖನಾಗುತ್ತಾನೆ. ಆನಂತರ ಅವನು ನಿರ್ಮೋಹತ್ವ ಮತ್ತು ಸ್ವ ನಿರಾಕರಣೆಯ ಭಾವನೆಯನ್ನು ಬೆಳೆಸಿಕೊಳ್ಳುತ್ತಾನೆ. ಅಂಥ ದಿನ ಅವನು ನಿಜವಾಗಿ ಸನಾತನ, ವಾಸ್ತವ ಅಥವಾ ಸತ್ಯ ಪ್ರಪಂಚದ ಬಗ್ಗೆ ಜ್ಞಾನಿಯಾಗುತ್ತಾನೆ. ಈ ಜ್ಞಾನ ಅವನ ಜೀವನದ ಅಂತಃಸತ್ವವನ್ನು ಪ್ರವೇಶಿಸಿದಾಗ ಅವನು ಸಕಲ ವೈಭೋಗಗಳ ಮಧ್ಯೆ ಇರಲು ಎಂದೂ ಭಯಪಡದ ರಾಜ ಜನಕನಂತಾಗುತ್ತಾನೆ.

ನಿರ್ಮೋಹತ್ವ ಮತ್ತು ನಿರಾಕರಣೆಯ ಭಾವನೆಯನ್ನು ತನ್ನಲ್ಲಿ ಬೆಳಸಿಕೊಳ್ಳುವುದರಿಂದಲೂ, ಕ್ರೋಢೀಕರಿಸಿಕೊಳ್ಳುವುದರಿಂದಲೂ ಮನುಷ್ಯ ಪಡೆಯುವುದಾದರೂ ಏನನ್ನು? ಪರಮಾತ್ಮನ ಅವಿಭಾಜ್ಯ ಅಂಗವಾದ ತನ್ನ ಆತ್ಮದರ್ಶನವನ್ನು. ನಂತರ ಅವನು ಪರಮಾತ್ಮನ ದರ್ಶನಕ್ಕಾಗಿ ಹಂಬಲಿಸುತ್ತಾನೆ. ತತ್ಫಲವಾಗಿ, ಅವನ ಈ ಹಂಬಲದ ದಾರಿಯಲ್ಲಿ ಅಡ್ಡ ಬರುವ ಪ್ರತಿಯೊಂದನ್ನೂ ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಾನೆ. ಅದಕ್ಕಾಗಿ ಎಂಥ ಕಷ್ಟವನ್ನಾದರೂ ಸಹಿಸಲು ಬೆಲೆತೆತ್ತುತ್ತಾನೆ. ಏಕೆಂದರೆ ಅನೇಕ ಬಾರಿ ಪ್ರಾಪಂಚಿಕ ಮೋಹವು ಆತ್ಮದ ಮೇಲೆ ಮುಸುಕು ಹಾಕುತ್ತದೆ.

ಗಾಂಧೀಜಿಯವರು ಭಗ್ವದ್ಗೀತೆಯ ಸ್ವಾರ್ಥ ನಿರಾಕರಣೆಯ ವಿಚಾರದಿಂದ ಪ್ರಭಾವಿತರಾಗಿದ್ದರೆ, ಟಾಗೋರರು ಈ ನಿಟ್ಟಿನಲ್ಲಿ ಉಪನಿಷತ್ತುಗಳಿಂದ ಮಾರ್ಗದರ್ಶನ ಪಡೆದಿದ್ದರು. ಅಂತಿಮವಾಗಿ ಅವರೀರ್ವರೂ ಉಪನಿಷತ್ತಿನಲ್ಲಿ ಪ್ರಕಟಗೊಂಡಿರುವ ಈ ಜಗತ್ತು ಪರಮಾತ್ಮನಿಂದ ಸುತ್ತುವರಿದಿದೆ. ಆದ್ದರಿಂದ "ಎಲೆ ಮಾನವನೆ, ನಿನ್ನಲ್ಲಿರುವ ತ್ಯಾಗದ ಭಾವನೆಯಿಂದ ನಿನ್ನಲ್ಲಿ ಏನೆಲ್ಲ ಇದೆಯೋ ಅದನ್ನು ಸಂತೋಷದಿಂದ ಅನುಭವಿಸು, ಬೇರೆಯವರ ಸ್ವತ್ತಿಗೆ ಆಸೆ ಪಡಬೇಡ" ಎಂಬ ಸತ್ಯಕ್ಕೆ ಬದ್ಧರಾಗಿದ್ದರು. ಆದರೆ ಗಾಂಧೀಜಿ ಈ ದಾರಿಯಲ್ಲಿ ಒಂದೊಂದೇ ಹೆಜ್ಜೆ ಇಡುತ್ತ ಸಾಗಿದರೆ ಕವಿ ಟಾಗೋರರು ಸೃಜನಾತ್ಮಕ ಕಲ್ಪನೆ ಮತ್ತು ಪ್ರೇರಣೆಯಿಂದ ಮುಂದುವರಿಯುವಂಥವರಾಗಿದ್ದರು.

ಪ್ರತಿಯೊಬ್ಬ ವ್ಯಕ್ತಿಯಲ್ಲಿ ಮೂಲಭೂತವಾಗಿರುವ ಮಾನವೀಯತೆಯನ್ನು ಗುರುತಿಸುವುದು ಮತ್ತು ಅದನ್ನು ಗೌರವಿಸುವುದು ಮಹಾತ್ಮರ ಶ್ರೇಷ್ಠ ಗುಣಗಳಲ್ಲಿ ಒಂದು. ಮಾನವ ನಿರ್ಮಿತ ಭೇದಗಳು ಮತ್ತು ವ್ಯತ್ಯಾಸಗಳಿದ್ದಾಗ್ಯೂ ಸರ್ವಾಂತರ್ಯಾಮಿಯಾದ ಭಗವಂತನು ಎಲ್ಲರಲ್ಲಿಯೂ ಇದ್ದಾನೆಂದು ಗಾಂಧೀಜಿ ಭಾವಿಸುತ್ತಾರೆ. ಆದ್ದರಿಂದ ಅವರು ಪ್ರತಿಯೊಬ್ಬರ ಮಿತ್ರರಾಗಿರುತ್ತಾರೆ. ಗುರುನಾನಕ್ ಹೀಗೆ ಹಾಡಿದ್ದಾರೆ : ಒಂದು ಪರಮೋನ್ನತ ಜೀವಿ ಪ್ರತಿಯೊಬ್ಬರ ಹೃದಯದಲ್ಲಿ ಅಥವಾ ಅಸ್ತಿತ್ವವುಳ್ಳ ವಸ್ತುವಿನಲ್ಲಿ ನೆಲಸಿರುತ್ತಾನೆ. ಆದ್ದರಿಂದ ನಾನು ಎಲ್ಲರೊಂದಿಗೆ ಸಖ್ಯ ಭಾವವನ್ನು ಹೊಂದಿದ್ದೇನೆ. ಆದರೆ ಪ್ರತಿಯೊಬ್ಬರಲ್ಲಿರುವ ಇಂಥ ನಿಹಿತ ಪರಮಾತ್ಮನ ಸ್ಪಷ್ಟ ಅರಿವು ಕಷ್ಟಕರವಾದ ಆತ್ಮ ಪರೀಕ್ಷೆ ಮತ್ತು ಆತ್ಮ ಸಂಯಮ ಮತ್ತು ಆತ್ಮಜ್ಞಾನ ಹಾಗೂ ಭಗವಂತನ ಕೃಪೆಯಿಂದ ಪಡೆದುದಂಥದ್ದಾಗಿರುತ್ತದೆ.

ಗಾಂಧೀಜಿ ಮತ್ತು ಟಾಗೋರರು ಪ್ರಪ್ರಥಮವಾಗಿ ತಮ್ಮ ಆತ್ಮಗಳಲ್ಲಿರುವ

ಪರಮಾತ್ಮನನ್ನು ಅರಿಯಲು ಪರಿಶ್ರಮಿಸಿದರು. ಇದು ತಮ್ಮ ಸಹಜೀವಿಗಳಲ್ಲಿರುವ ಪರಮಾತ್ಮನನ್ನು ಗ್ರಹಿಸಲು ಅವರನ್ನು ಸಮರ್ಥರನ್ನಾಗಿ ಮಾಡಿತು. ಈ ಗುರಿಗಾಗಿ ಅವರು ಎಲ್ಲರೊಂದಿಗೆ ಪ್ರೇಮ ಮತ್ತು ಸದ್ಭಾವನೆಯೊಂದಿಗೆ ನಡೆದುಕೊಂಡರು. ಆದ್ದರಿಂದಲೇ ಅವರೀರ್ವರು ಅಸ್ಪೃಶ್ಯತೆಯ ವಿರುದ್ಧ ಗದೆಯನ್ನು ಎತ್ತಿದರು ಮತ್ತು ಪ್ರಾರಂಭದಿಂದಲೇ ತಮ್ಮ ಸಂಸ್ಥೆಗಳಲ್ಲಿ ಅಸ್ಪೃಶ್ಯರೆಂದು ಕರೆಯಲಾಗುತ್ತಿದ್ದವರನ್ನು ಸೇರಿಸಿಕೊಂಡರು. ಬ್ರಾಹ್ಮಣರನ್ನೂ ಮತ್ತು ಭಂಗಿಯನ್ನೂ ಜೊತೆ ಮಾಡುವುದರ ಮೂಲಕ ದೈವಿಕ ಕಾರಣದಿಂದ ರಚಿತವಾದ ಸಮಾಜ ವ್ಯವಸ್ಥೆಯನ್ನು ಕದಡಿದ್ದಕ್ಕಾಗಿ ಸಂಪ್ರದಾಯವಾದಿಗಳು ಅವರನ್ನು ಕಟುಕಿದರು, ಟೀಕಿಸಿದರು ಆದರೆ ಅವರು ಆಕ್ಷೇಪಣೆಯುಕ್ತ ಟೀಕೆಗಳಿಗೆ ಸೊಪ್ಪು ಹಾಕದೆ ಸಾರ್ವತ್ರಿಕವಾಗಿರುವ ಮಾನವೀಯತೆಯ ಸತ್ಯಕ್ಕೇ ಕಟಿಬದ್ಧರಾದರು. ಏಕೆಂದರೆ ಮನುಷ್ಯನನ್ನು ಅವಮಾನಿಸುವುದೆಂದರೆ ದೇವರನ್ನೇ ಅವಮಾನಿಸಿದಂತೆ ಎಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು. ಅವರು ಇನ್ನೂ ಮುಂದೆ ಹೋದರು. ಹಿಂದೂ ಸಮಾಜದಲ್ಲಿಯ ವಿವಿಧ ಜಾತಿ ಉಪಜಾತಿಗಳಲ್ಲಿ ಪ್ರೇಮಪೂರ್ಣ ಮಾನವ ಬಾಂಧವ್ಯವನ್ನು ಬಯಸಿದರಲ್ಲದೆ, ಭಾರತದಲ್ಲಿಯ ಹಿಂದೂ ಮತ್ತು ಮುಸಲ್ಮಾನರಲ್ಲಿಯೂ, ಎಲ್ಲ ದೇಶಗಳಲ್ಲಿಯ ಎಲ್ಲ ಜನಾಂಗಗಳಲ್ಲಿಯೂ ಅದನ್ನು ಬಯಸಿದರು. ಏಕೆಂದರೆ ಅವರ ದೃಷ್ಟಿಯಲ್ಲಿ ಸರ್ವಮಾನ್ಯವಾದ ಮಾನವೀಯತೆ ದೇವತ್ವಕ್ಕೆ ಪರ್ಯಾಯವಾಗಿತ್ತು. ಇದು ಕೇವಲ ಕಲ್ಪನೆಗೆ ಸೀಮಿತವಾಗಿರದೆ ಎಲ್ಲ ವ್ಯವಹಾರಕ್ಕೆ ಸಂಬಂಧಿಸಿದುದಾಗಿತ್ತು. ಆದರೆ, ಅಲ್ಲೂ ರಾಜಕಾರಣ ಮತ್ತು ಪ್ರಾಂತೀಯ ವಿಷ ನಿರಂತರವಾಗಿ ಬೆಳೆಯುವ ಮಾನವೀಯ ಸಂಬಂಧಗಳಲ್ಲಿ ಜಿನಗುತ್ತಲೇ ಈ ಸತ್ಯಕ್ಕೆ ಗ್ರಹಣ ಹಿಡಿಯಿತು. ಜೊತೆಗೆ ಭಯಂಕರವಾದ ಬುದ್ಧಿ ಭ್ರಮಣೆ ಮತ್ತು ವಿದೂರತನ ಬಂದವು.

ಗಾಂಧೀಜಿ ಮತ್ತು ಟಾಗೋರರು ಇಡೀ ಮಾನವೀಯತೆಯ ಬಗ್ಗೆ ಗೌರವ ಹೊಂದಿದ್ದರೆಂಬ ಸತ್ಯವನ್ನು ಅವರು ತಮ್ಮ ತಮ್ಮ ಸಂಸ್ಥೆಗಳಲ್ಲಿ ಇದ್ದ ಕಾಯಿಲೆಯುಳ್ಳವರ ಬಗ್ಗೆ, ನೊಂದವರ ಬಗ್ಗೆ ಹೊಂದಿದ್ದ ದಯಾಪೂರ್ಣ ಕಾಳಜಿ ಮತ್ತು ಚಿಂತೆಯೇ ಸಾಕ್ಷಿಯಾಗಿವೆ. ಈ ಮಾನವ ಸೇವೆಯೇ ಅವರ ಏಕೈಕ ಚಿಂತೆಯಾಗಿತ್ತೇನೋ ಎಂಬಂತೆ ಆ ಕಾಲಕ್ಕೆ ತೋರುತ್ತಿತ್ತು. ಕಾಯಿಲೆಯಾದವರನ್ನು ತಮ್ಮ ಶಕ್ತಿಪ್ರದಾಯಕ ಪ್ರೇಮ ಮತ್ತು ನಗುಗಳಿಂದ ಸಮಾಧಾನ ಮಾಡುತ್ತಿದ್ದರು. ಖುಷಿಪಡಿಸುತ್ತಿದ್ದರು. ಇಲ್ಲಿ ಸಹಜವಾಗಿ ಹೇಳುವ ಮಾತೊಂದಿದೆ. ಅವರು ರೋಗಿಯ ಬಳಿ ಎಂದೂ ಹೂವನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ. ಅದನ್ನು ಗಿಡದಿಂದ ಕಿತ್ತುಕೊಳ್ಳುವುದರಿಂದ ಅವರಿಗೆ ನೋವಾಗುತ್ತಿತ್ತು. ಹೂವಿನ ನ್ಯಾಯೋಚಿತ ಸ್ಥಾನ ಗಿಡ ಎಂದು ಅವರು ತಿಳಿದಿದ್ದರು. ಯಾವ ವಸ್ತು ಯಾವ ಸ್ಥಳದಲ್ಲಿರಬೇಕೋ ಹಾಗಿರುವುದೇ ಸೌಂದರ್ಯವೆಂದು ಯಾರೋ ಒಬ್ಬರು ವ್ಯಾಖ್ಯಾನಿಸಿಲ್ಲವೆ?

– ಅನು: ಸು.ಕೌ

* * *

ಜನಪದ ವ್ಯಕ್ತಿ

ಡಾ. ಲಿಂಗಪ್ಪ ಕಲಬುರ್ಗಿ

ಕಿವಿಗಳ ನಾಡಿನಲ್ಲಿ ಕನ್ನಡ ಕವಿಗಳು ರಾರಾಜಿಸತೊಡಗಿದ್ದಾರೆ!

ಅಚ್ಚರಿ ಅನ್ನಿಸಿದರೂ ಈ ಮಾತು ಸತ್ಯ. ಪೂರ್ವ ದೇಶವಾದ ನ್ಯೂಜಿಲೆಂಡ್‌ನ ಆಕ್ಲಂಡ್ ನಗರದಲ್ಲಿ, ಹರಿದು ಹಂಚಿಹೋಗಿದ್ದ ಕನ್ನಡಿಗರನ್ನು ಮತ್ತೆ ಒಂದುಗೂಡಿಸುವ ಮೂಲಕ ಡಾ. ಲಿಂಗಪ್ಪ ಕಲಬುರ್ಗಿ ಅದನ್ನೊಂದು ಬಲಶಾಲಿ ಸಂಘವನ್ನಾಗಿ ರೂಪಿಸಿದ್ದಾರೆ.

ಗ್ರಂಥಪಾಲಕ ಹುದ್ದೆಯಲ್ಲಿರುವ ಡಾ. ಲಿಂಗಪ್ಪ, ೧೯೯೬ಳರಲ್ಲಿ ಆಕ್ಲಂಡ್ ನಗರಕ್ಕೆ ಹೋದರು. ತವರು ತೊರೆದ ಹೆಣ್ಣಿನಂತಾಗಿದ್ದ ಅವರಿಗೆ ಕನ್ನಡಿಗರನ್ನು ಕಂಡು ಮಾತನಾಡುವ ಆಸೆ.

ಆದರೆ ಆಕ್ಲಂಡ್ ಕನ್ನಡಿಗರಲ್ಲಿ ಸಂಘಟನೆ ಇರಲಿಲ್ಲ. ಇದಕ್ಕಾಗಿ ಅವರು ಸಾಕಷ್ಟು ಪ್ರಯತ್ನ ಪಡಬೇಕಾಯಿತು. ಹಲವಾರು ಹಿರಿಯರನ್ನು ಕಂಡು, ಚರ್ಚಿಸಿದ ಅವರು, ನಗರದ ಒನ್ ಟ್ರೀ ಹಿಲ್ (ಒಂಟಿ ಮರದ ಬೆಟ್ಟ) ನಲ್ಲಿ ಭೋಜನ ಕೂಟ ಏರ್ಪಡಿಸುವ ಮೂಲಕ ಅಲ್ಪ ಸಂಖ್ಯಾತರಾಗಿದ್ದ ಕನ್ನಡಿಗರನ್ನು ಒಂದುಗೂಡಿಸಿದರು. ಆಗ ಹುಟ್ಟಿದ್ದು 'ನ್ಯೂಜಿಲೆಂಡ್ ಕನ್ನಡ ಕೂಟ'.

ಸ್ಥಳೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವಾಮನಮೂರ್ತಿ ಅವರನ್ನು ಅಧ್ಯಕ್ಷರನ್ನಾಗಿಸಿದ ಡಾ. ಕಲಬುರ್ಗಿ ತಾವು ಸಂಸ್ಥಾಪಕ ಕಾರ್ಯದರ್ಶಿಗಳಾದರು. ಅಲ್ಲಿಂದ ಶುರುವಾದ ಕನ್ನಡ ಕಟ್ಟುವ ಕಾಯಕಕ್ಕೆ ಈಗ ೧೩ ವರ್ಷ.

ಇಷ್ಟು ಸಣ್ಣ ಅವಧಿಯಲ್ಲಿ ಕನ್ನಡ ಮತ್ತು ಕನ್ನಡಿಗರಿಬ್ಬರೂ ಬೆಳೆದಿದ್ದಾರೆ. ಹಲವಾರು ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಕನ್ನಡಿಗರನ್ನು ಪದೆಪದೆ ಒಂದೆಡೆ ಸೇರುವಂತೆ ಮಾಡಿದ್ದಾರೆ. ಕರ್ನಾಟಕದಿಂದ ಬರುವ ರಾಜಕೀಯ, ಔದ್ಯೋಗಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರತಿಷ್ಠಿತರನ್ನು ಆಹ್ವಾನಿಸಿ, ಗೌರವಿಸುವ ಮೂಲಕ ಕನ್ನಡಿಗರ ಭಾಗಿತ್ವವನ್ನು ನಿರಂತರವಾಗಿಸಿದವರು ಡಾ. ಲಿಂಗಪ್ಪ.

ರಾಮಕೃಷ್ಣ ಹೆಗಡೆ ಆದಿಯಾಗಿ ಮಲ್ಲಿಕಾರ್ಜುನ ಖರ್ಗೆ, ರಾಣಿ ಸತೀಶ, ಎಚ್.ಎಸ್.ಮಹದೇವಪ್ರಸಾದ, ಡಾ.ಮಾಲಕರೆಡ್ಡಿ ಅವರಂತಹ ರಾಜಕಾರಣಿಗಳು, ಮಾಸ್ಟರ್ ಹಿರಣ್ಣಯ್ಯ, ಅರಳುಮಲ್ಲಿಗೆ ಪಾರ್ಥಸಾರಥಿ, ಸುಧಾ ಬರಗೂರು, ಬಿ.ಆರ್. ಛಾಯಾ, ಮಂಜುಳಾ ಗುರುರಾಜ, ಡಾ. ಎಂ.ಎಂ. ಕಲಬುರ್ಗಿ ಅವರಂತಹ ಸಾಹಿತಿ–ಕಲಾವಿದರು ಆಕ್ಲಂಡ್‌ನ ಕನ್ನಡ ಕೂಟಕ್ಕೆ ಭೇಟಿ ನೀಡಿದ್ದಾರೆ. ಕನ್ನಡಿಗರನ್ನು ತಾಯ್ನಾಡಿನೊಂದಿಗೆ ಬೆಸೆದಿದ್ದಾರೆ.

ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ನ್ಯೂಜಿಲೆಂಡ್ ಪ್ರಧಾನಿ ಹೆಲೆನ್ ಕ್ಲಾರ್ಕ್, ಗವರ್ನರ್ ಜನರಲ್ ಆನಂದ ಸತ್ಯಾನಂದ, ಸಚಿವರಾದ ಕ್ರಿಸ್ ಕಾರ್ಟರ್, ಫಿಲ್ ಗಾಫ್ ಮುಂತಾದವರೂ ಆಗಮಿಸುವ ಮೂಲಕ ಕನ್ನಡ ಕೂಟಕ್ಕೆ ಹೆಮ್ಮೆ ತಂದಿದ್ದಾರೆ.

ಕನ್ನಡಿಗರ ನಡುವೆ ಪುಸ್ತಕ ಪ್ರೀತಿ ಹುಟ್ಟಿಸುವ ನಿಟ್ಟಿನಲ್ಲಿ ಮಹಾತ್ಮ ಗಾಂಧಿ ಕೇಂದ್ರದ ಕಟ್ಟಡದಲ್ಲಿ ಎರಡು ಕೊಠಡಿಗಳನ್ನು ಉಚಿತವಾಗಿ ಪಡೆದು ಅಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಿದ ಡಾ. ಲಿಂಗಪ್ಪ, ಭಾರತದ ಭೇಟಿಯಿಂದ ಹಿಂತಿರುಗುವಾಗೆಲ್ಲ ವಿವಿಧ

ಸಾಹಿತಿಗಳು ನೀಡುವ ಉಚಿತ ಪ್ರತಿಗಳನ್ನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಖರೀದಿಸಿದ ಪುಸ್ತಕಗಳನ್ನು ತಂದು ಪೇರಿಸಿದರು.

ಇದರ ಪರಿಣಾಮವಾಗಿ, ಗ್ರಂಥಾಲಯದಲ್ಲಿ ೫,೦೦೦ ಕ್ಕೂ ಹೆಚ್ಚು ಕನ್ನಡ ಪುಸ್ತಕಗಳು ಸಂಗ್ರಹವಾಗಿವೆ. ಸುಮಾರು ಕನ್ನಡ ಸಿನಿಮಾದ ೧,೦೦೦ ವೀಡಿಯೊ ಹಾಗೂ ಧ್ವನಿ ಸುರುಳಿಗಳಿವೆ. ದೂರದಲ್ಲಿರುವ ತಮಗೆ ಇದಕ್ಕಿಂತ ಅಮೂಲ್ಯವಾದದ್ದು ಇನ್ನೊಂದಿಲ್ಲ ಎಂಬುದು ಕನ್ನಡಿಗರೆಲ್ಲರ ಅಭಿಮತ.

ಕ್ರಮೇಣ ಬಲಗೊಂಡ ಸಂಘ ಸಹಜವಾಗಿ ಅಲ್ಲಿಯ ಜನರ ಗಮನ ಸೆಳೆಯಿತು. ಕನ್ನಡ ಚಟುವಟಿಕೆಗಳಿಗೆ ಬೆಂಬಲ ದಕ್ಕಿತು. ಮಕ್ಕಳಿಗಾಗಿ ಕುವೆಂಪು ಕನ್ನಡ ಶಾಲೆ ಹಾಗೂ ಸಂಗೀತ ತರಬೇತಿಯನ್ನು ಪ್ರಾರಂಭಿಸಲಾಗಿದೆ. ಆಕ್ಲಂಡ್‌ನ ಆಕಾಶವಾಣಿಯಲ್ಲಿ ವಾರಕ್ಕೆ ಅರ್ಧ ಗಂಟೆಯ ಮಟ್ಟಿಗೆ ಕನ್ನಡದಲ್ಲಿ ಸುದ್ದಿ, ಹಾಡು, ಸಂದರ್ಶನ ಹಾಗೂ ಸಂಘದ ಚಟುವಟಿಕೆಗಳ ಪ್ರಸಾರ ನಡೆಯುತ್ತಿದೆ. ಕನ್ನಡಿಗರೆಲ್ಲರೂ ಒಂದೇ ಕಡೆ ವ್ಯಾಪಾರ-ವ್ಯವಹಾರ ನಡೆಸಲು ವ್ಯವಸ್ಥೆ ಮಾಡುವ ಮೂಲಕ ಖರೀದಿಯಲ್ಲಿ ಶೇ.೧೦ ರಿಂದ ೧೫ರಷ್ಟು ರಿಯಾಯಿತಿ ಗಿಟ್ಟಿಸಲಾಗಿದೆ.

೨೦೦೪ರಲ್ಲಿ ನ್ಯೂಜಿಲೆಂಡ್ ಕನ್ನಡ ಕೂಟ ತನ್ನ ದಶಮಾನೋತ್ಸವವನ್ನು ಸಂಭ್ರಮದಿಂದ ಆಚರಿಸಿಕೊಂಡಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಗಿನ ಕುಲಪತಿ ಡಾ.ಎಂ.ಎಂ.ಕಲಬುರ್ಗಿ, ಸಂಘದ ಚಟುವಟಿಕೆಗಳನ್ನು ಮೆಚ್ಚಿ, ಕೆಲವು ದಿನಗಳ ಕಾಲ ಅಲ್ಲಿಯೆ ತಂಗಿ, ಕರ್ನಾಟಕದ ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ಕವಿವರೇಣ್ಯರ ಕುರಿತು ಉಪನ್ಯಾಸಗಳನ್ನು ನೀಡಿದರು.

ಸಂಘ ಇಂತಹ ಹಲವಾರು ಪ್ರಥಮಗಳನ್ನು ಸಾಧಿಸಲು ಕಾರಣಕರ್ತರಾದ ಡಾ. ಲಿಂಗಪ್ಪ ಕಲಬುರ್ಗಿ ಅವರನ್ನು ಮಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ೭೩ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಲು ಆಹ್ವಾನಿಸಲಾಗಿತ್ತು.

ಆಕ್ಲಂಡ್‌ನ ಹಲವಾರು ಸಂಘ-ಸಂಸ್ಥೆಗಳು ಅವರನ್ನು ಸದಸ್ಯರನ್ನಾಗಿ ಮಾಡಿಕೊಂಡಿವೆ. ಇವರ ಜನಪ್ರಿಯತೆ ಗಮನಿಸಿದ ನ್ಯೂಜಿಲೆಂಡ್ ಸರ್ಕಾರ ಎಲಿಜೆಬೆತ್ ರಾಣಿಯ ಜನ್ಮ ದಿನದಂದು ಪ್ರತಿಷ್ಠಿತರಿಗೆ ಪ್ರದಾನ ಮಾಡುವ 'ಕ್ವೀನ್ಸ್ ಅವಾರ್ಡ್' ಅನ್ನು ೨೦೦೪ ರಲ್ಲಿ ನೀಡಿ ಗೌರವಿಸಿತು. ಈ ಪ್ರಶಸ್ತಿಯನ್ನು ಪಡೆದ ಪ್ರಥಮ ಭಾರತೀಯರು ಇವರು.

ಇಷ್ಟೆಲ್ಲ ಆಗಿದ್ದು ಕನ್ನಡ ಕಟ್ಟುವ ಕಾಯಕದ ಮೂಲಕ ಎಂಬುದು ಗಮನಾರ್ಹ. ಇವೆಲ್ಲಕ್ಕಿಂತ ಅಚ್ಚರಿ ಹುಟ್ಟಿಸಿದ್ದು, 'ಸಿಟಿ ವಿಜನ್' ಎಂಬ ರಾಜಕೀಯ ಪಕ್ಷದ ಕ್ರಮ. ಪಕ್ಷದ ಪರವಾಗಿ ಆಕ್ಲಂಡ್ ನಗರಸಭೆ ಚುನಾವಣೆಗೆ ಸ್ಪರ್ಧಿಸುವಂತೆ ಡಾ. ಲಿಂಗಪ್ಪ ಕಲಬುರ್ಗಿ ಅವರಿಗೆ ಅದು ಟಿಕೆಟ್ ನೀಡಿದ್ದು, ಅಕ್ಟೋಬರ್ ೧೩, ೨೦೦೭ ರಂದು ಮತದಾನ ನಡೆಯಲಿದೆ.

ಕನ್ನಡದ ಮೇಲಿನ ಪ್ರೀತಿಯಿಂದ ನಡೆಯುತ್ತಿರುವ ಸಾಂಘಿಕ ಚಟುವಟಿಕೆಗಳು ಆ ದೇಶದ ಜನತೆಯ ಅಭಿಮಾನಕ್ಕೆ ಪಾತ್ರವಾಗಿದ್ದು ನಿಜಕ್ಕೂ ವಿಶೇಷ. ಡಾ. ಲಿಂಗಪ್ಪ ಕಲಬುರ್ಗಿ ಗೆಲ್ಲುವಂತಾಗಲಿ, ಆ ಮೂಲಕ ಕನ್ನಡದ ಪತಾಕೆ ಇನ್ನಷ್ಟು ಮೇಲೇರುವಂತಾಗಲಿ.

- ಚಾಮರಾಜ ಸವಡಿ

ಕಲಿಯುವಿಕೆಯಲ್ಲಿ ಕಾಣುವಿಕೆಯ ಶಿಕ್ಷಣ

– ಜೆ. ಕೃಷ್ಣಮೂರ್ತಿ. ಅನುವಾದ : ಪ್ರಹ್ಲಾದ ಅಗಸನಕಟ್ಟೆ

ನೋಡಿ ಕಲಿಯುವಿಕೆ ಏನು ಎಂದು ತಿಳಿದುಕೊಳ್ಳುವುದು ಬಹಳ ಆಸಕ್ತಿದಾಯಕ ವಿಷಯ ; ಗಣಿತವನ್ನು, ಭೂಗೋಳವನ್ನು, ಇತಿಹಾಸವನ್ನು, ಪುಸ್ತಕದಿಂದಲೋ ಅಥವಾ ಗುರು ಮುಖೇನವೋ ಕಲಿಯುತ್ತೇವೆ. ಹಾಗೆಯೇ ಲಂಡನ್ ಎಲ್ಲಿದೆ? ಮಾಸ್ಕೋ ಎಲ್ಲಿದೆ ? ಅಥವಾ ನ್ಯೂಯಾರ್ಕ್ ಎಲ್ಲಿದೆ ಎಂದು ಕೂಡ ಅಭ್ಯಸಿಸುತ್ತೇವೆ. ಯಂತ್ರಗಳು ಹೇಗೆ ಕೆಲಸ ಮಾಡುತ್ತವೆ, ಹಕ್ಕಿಗಳು ಹೇಗೆ ಗೂಡು ಕಟ್ಟುತ್ತವೆ, ತಮ್ಮ ಮರಿಗಳನ್ನು ಹೇಗೆ ಪೋಷಣೆ ಮಾಡುತ್ತವೆ...ಇತ್ಯಾದಿ. ಹತ್ತಾರು ಸಂಗತಿಗಳನ್ನು ಕಲಿಯುತ್ತೇವೆ. ವ್ಯಾಸಂಗ ಹಾಗೂ ವೀಕ್ಷಣೆ ಈ ಎರಡು ವಿಧಾನಗಳಿಂದಲೂ ಕಲಿಯುತ್ತೇವೆ. ಈ ರೀತಿಯ ಕಲಿಕೆ ಒಂದು ರೀತಿಯದು.

ಇನ್ನೊಂದು ಬಗೆಯ ಕಲಿಕೆ ಕೂಡ ಇದೆಯಲ್ಲವೆ? ಅದು ನಮ್ಮ ಅನುಭವ ನಮಗೆ ಕಲಿಸಿಕೊಡುವ ಶಿಕ್ಷಣ. ನದಿಯೊಂದರಲ್ಲಿ ಸಾಗುವ ದೋಣಿ, ಪ್ರಶಾಂತ ನೀರಲ್ಲಿ ಪ್ರತಿಬಿಂಬಿಸುವ ಅದರ ನೆರಳು–ನಡಿಗೆ, ಅದರ ಅಂದ ಚೆಂದವನ್ನು ನಾವು ನೋಡುತ್ತೇವೆ. ಇದೊಂದು ಅಸಾಮಾನ್ಯ ಅನುಭವವಲ್ಲವೇ? ಆಗ ಏನಾಗುತ್ತದೆ? ಜ್ಞಾನವನ್ನು ತನ್ನಲ್ಲಿ ಸಂಗ್ರಹಿಸಿಟ್ಟುಕೊಳ್ಳುವ ಹಾಗೆ ಮನಸ್ಸು ಇಂಥ ವಿಶೇಷ ಅನುಭವವೊಂದನ್ನು ತನ್ನ ಸ್ಮೃತಿಯಲ್ಲಿ ಶೇಖರಿಸಿಟ್ಟುಕೊಳ್ಳುತ್ತದೆ. ಇನ್ನೊಮ್ಮೆ ಇಂಥದ್ದೇ ದೃಶ್ಯವನ್ನು ಕಾಣುವ ಸಲುವಾಗಿ, ಅಂಥ ಸಂತೋಷವನ್ನು ಪುನಃ ಅನುಭವಿಸುವ ಸಲುವಾಗಿ, ಬದುಕಿನಲ್ಲಿ ತೀರಾ ಅಪರೂಪವಾಗಿ ಒದಗುವ ಇಂಥ ಸಂದರ್ಭಕ್ಕಾಗಿ ಮರುದಿನ ಸಂಜೆ ಅದೇ ತಾಣಕ್ಕೆ ಧಾವಿಸುತ್ತದೆ. ಅಂದರೆ ಮನಸ್ಸು ನಿರಂತರವಾಗಿ ಅನುಭವಗಳನ್ನು ಸಂಗ್ರಹಿಸುತ್ತಾ, ಸಂಗ್ರಹಿಸುವ ದಿಕ್ಕಿನತ್ತಲೇ ನಿರಂತರ ಸಾಗುತ್ತದೆ. ಈ ಅನುಭವಗಳ ಸಂಗ್ರಹಣೆಯೇ ನೆನಪಾಗಿ, ಆ ನೆನಪುಗಳೇ ನಮ್ಮ ಕಲಿಕೆಗೆ ದಾರಿ ಮಾಡಿಕೊಡುತ್ತವಲ್ಲವೆ? ನದಿಯ ಮೇಲೆ ಹರಿವ ದೋಣಿಯನ್ನು ನೋಡಿ ಸಂತೋಷಪಟ್ಟ ನಾವು ಅಂಥದ್ದೇ ಸಂತೋಷ ಮರಳಿ ಮರಳಿ ದಕ್ಕಲಿ ಎಂದು ಆಶಿಸುತ್ತೇವೆ. ಹೀಗೆ ನಮ್ಮ ಆಲೋಚನಾ ಕ್ರಮ ಸಾಗುತ್ತದಲ್ಲವೆ?

ನೋಡಿ, ಕೆಲವೇ ಜನರಿಗೆ ಮಾತ್ರ ಹೇಗೆ ಆಲೋಚಿಸುವುದು ಎಂದು ತಿಳಿದಿದೆ. ಉಳಿದ ನಾವೆಲ್ಲಾ ಪುಸ್ತಕದಲ್ಲಿ ಕಲಿತದ್ದನ್ನೋ, ಯಾರೋ ನಮಗೆ ಯಾವಾಗಲೋ ಹೇಳಿದ್ದನ್ನೋ ಅಥವಾ ನಮ್ಮ ಅಲ್ಪಾನುಭವದಲ್ಲಿ ನಮಗೆ ತಿಳಿದಿದ್ದನ್ನೋ ಸದಾ ವಟಗುಟ್ಟುತ್ತಿರುತ್ತೇವೆ. ನಾವು ಪ್ರಪಂಚವನ್ನೆಲ್ಲಾ ಸುತ್ತಬಹುದು, ಅಸಂಖ್ಯಾತ ಅನುಭವಗಳಿಗೆ ನಮ್ಮನ್ನು ಒಡ್ಡಿಕೊಳ್ಳಬಹುದು. ಬಗೆಬಗೆಯ ಜನರನ್ನು

ಭೇಟಿಯಾಗಿ, ಅವರ ಆಚಾರ-ವಿಚಾರ, ನಡೆನುಡಿಗಳನ್ನು ನೋಡಿ ನೆನಪಿಟ್ಟುಕೊಳ್ಳಬಹುದು. ಇಂಥ ಕಲಿಕೆ, ನಾವು ಸಾಮಾನ್ಯವಾಗಿ ವಾಡಿಕೆಯಲ್ಲಿ ಕರೆಯುವ 'ಕಲಿಕೆ' ಯಾಗಿದೆ. ಆದರೆ ಈ ಬಗೆಯ ಕಲಿಕೆಯ ವ್ಯಾಪ್ತಿ ಅತಂತ್ಯ ಕಿರಿದು. ಸಣ್ಣ ಕ್ಷೇತ್ರವೊಂದರ ಸುತ್ತಾ ಸುಮ್ಮನೆ ಗಿರಕಿ ಹೊಡೆಯುವಂತಹದ್ದು.

ನದಿಯೊಂದರಲ್ಲಿ ಸಾಗುವ ದೋಣಿಯನ್ನೋ, ಸುಡಲಿಕ್ಕೆಂದು ಸ್ಮಶಾನಕ್ಕೆ ಸಾಗಿಸುವ ಶವವನ್ನೋ ಅಥವಾ ಭಾರವಾದ ಹೊರೆ ಹೊತ್ತು, ಭಾರ ಹೆಜ್ಜೆಗಳಲ್ಲಿ ಸಾಗುವ ಹಳ್ಳಿಯ ಹೆಂಗಸನ್ನೋ ನೋಡುತ್ತೇವೆ. ಈ ಎಲ್ಲಾ ದೃಶ್ಯಗಳನ್ನು ಕಣ್ಣಾರೆ ಕಾಣುತ್ತವೆ. ಆದರೆ ನಾವು ಎಷ್ಟೊಂದು ಜಡಗಟ್ಟಿದ್ದೇವೆಂದರೆ, ಈ ಎಲ್ಲಾ ದೃಶ್ಯಗಳೂ ನಮ್ಮ ಮೇಲೆ ಏನೂ ಪರಿಣಾಮ ಬೀರುವುದಿಲ್ಲ. ನಮ್ಮ ಚೇತನಗಳನ್ನು ಅಲ್ಲಾಡಿಸಿ ನಮ್ಮನ್ನು ಮಾಗುವಂತೆ ಮಾಡುವುದಿಲ್ಲ. ನಮ್ಮ ಸುತ್ತಲಿನ ಎಲ್ಲಾ ಸಂಗತಿಗಳಿಗೂ ನಾವು ಮುಕ್ತವಾಗಿ ತೆರಕೊಂಡು ಸ್ಪಂದಿಸುವುದು ಯಾವಾಗ ಸಾಧ್ಯವಾಗುತ್ತದೋ, ಆಗ ಮತ್ತೊಂದು ವಿಭಿನ್ನ ಬಗೆಯ ಕಲಿಕೆ ನಮ್ಮೊಳಗೆ ಆರಂಭವಾಗುತ್ತದೆ. ಅದರ ವ್ಯಾಪ್ತಿ ಅನಂತಾನಂತವಾಗಿರುತ್ತದೆ.

ಒಂದು ವೇಳೆ ನೀವು ಯಾವುದಾದರೂ ಒಂದು ನಂಬುಗೆಗೆ ಅಥವಾ ಇನ್ನಾವುದಕ್ಕಾದರೂ ಗಟ್ಟಿಯಾಗಿ ಅಂಟಿಕೊಂಡಿದ್ದರೆ, ಆಗ ನೀವು ಎಲ್ಲವನ್ನೂ ಪೂರ್ವಗ್ರಹ ಮತ್ತು ಅಂಥ ಮಲೀನ ಮನಸ್ಸಿನಿಂದ ಕಾಣುತ್ತೀರಿ. ವಾಸ್ತವತೆ ಎಂದೂ ನಿಮ್ಮ ಗ್ರಹಿಕೆಗೆ ಲಭ್ಯವಾಗುವುದೇ ಇಲ್ಲ. ಹಳ್ಳಿಯ ಹೆಣ್ಣೊಂದು ಹೊರಲಾರದ ಹೊರೆ ಹೊತ್ತು ಪಟ್ಟಣದ ಕಡೆ ನಡೆವುದನ್ನು ನೀವು ಎಂದಾದರೂ ಕಂಡಿದ್ದೀರಾ? ಅಥವಾ ಇಂಥ ದೃಶ್ಯವನ್ನು ನೀವು ದಿನಂಪ್ರತಿ ನೋಡಿದವರೇ ಆಗಿದ್ದರೆ ಅದಕ್ಕೆ ನಿಮ್ಮ ಮನಸ್ಸು ಒಗ್ಗಿ ಹೋಗಿ "ಅದರಲ್ಲೇನು ಮಹಾ" ಇದೆ ಎಂದು ಅನ್ನಿಸಿಬಿಟ್ಟಿರುತ್ತದೆ. ಆಗ ನೀವು ಅದನ್ನು ಗಮನಿಸುವ ಸಾಧ್ಯತೆಯೇ ಇಲ್ಲ. ಯಾವುದಕ್ಕಾದರೂ ಹೊಸದಕ್ಕೆ ಪ್ರಪ್ರಥಮವಾಗಿ ನೀವು ತೆರೆದುಕೊಂಡಾಗ ಅದನ್ನು ನೀವು ಹೇಗೇ ನೋಡುತ್ತೀರಿ? ನಿಮ್ಮ ಹಳೆಯ ನಂಬಿಕೆ, ಕಲಿಕೆ, ಪೂರ್ವಾಗ್ರಹಗಳಿಂದ ನೋಡಲು ಯತ್ನಿಸುವಿರಲ್ಲವೆ? ನೀವು ಏನಾಗಿದ್ದೀರೋ ಹಾಗೆ ನೋಡಲು ಅಂದರೆ ಕಮ್ಯೂನಿಸ್ಟ್ ಆಗಿದ್ದರೆ ಕಮ್ಯೂನಿಸ್ಟಾಗಿ, ಸಮಾಜವಾದಿಯಾಗಿದ್ದರೆ ಸಮಾಜವಾದಿಯಾಗಿ, ಬಂಡವಾಳಶಾಹಿಯಾಗಿದ್ದರೆ ಬಂಡವಾಳಶಾಹಿಯಾಗಿ ಅಥವಾ ಇನ್ನಾವ 'ವಾದಿ' ಯಾಗಿದ್ದೀರೋ ಆ 'ವಾದಿ' ಯಾಗಿ ಕಾಣುತ್ತೀರಿ.

ಆದರೆ ಮೇಲಿನ ಯಾವ 'ವಾದಿ' ಗಳೂ ನೀವಲ್ಲದಿದ್ದರೆ, ಆಗ ಯಾವ ನೀಲಿಗಣ್ಣುಗಳೂ ಇಲ್ಲದೆ, ನಂಬುಗೆಗಳೂ ಇಲ್ಲದೆ, ನೇರವಾಗಿ ವಾಸ್ತವತೆಯೊಂದಿಗೆ ಸಂಬಂಧ ಸೃಷ್ಟಿಸಿಕೊಳ್ಳುತ್ತೀರಿ. ಆಗ ಮಾತ್ರ ನೀವು ನಿಮ್ಮ ಮತ್ತು ನೀವು ಕಾಣುವ ದೃಶ್ಯದೊಡನೆ ಎಂಥಹ ಅದ್ಭುತ ಸಂಬಂಧವಿದೆ ಎಂದು ಅರ್ಥಮಾಡಿಕೊಳ್ಳಬಲ್ಲಿರಿ.

ಯಾವುದೇ ಪೂರ್ವಗ್ರಹ ಅಥವಾ ನಕರಾತ್ಮಕ ನಿಲುವುಗಳು ನಿಮ್ಮಲ್ಲಿಲ್ಲದಿದ್ದರೆ, ನೀವು ಮುಕ್ತ ಮನಸ್ಸಿನ ವ್ಯಕ್ತಿಗಳಾಗಿದ್ದರೆ ಆಗ ನಿಮ್ಮ ಸುತ್ತಲಿನ ಸಕಲ ಸಂಗತಿಗಳೂ ಅಸಾಮಾನ್ಯ ಕುತೂಹಲಕ್ಕೆ ಎಡೆಮಾಡುತ್ತವೆ ಜೀವಂತವೆನಿಸುತ್ತವೆ.

ನೀವು ಚಿಕ್ಕವರಾಗಿದ್ದಾಗ ಸುತ್ತಣ ಎಲ್ಲ ಸಂಗತಿಗಳನ್ನು ತೀವ್ರ ಕುತೂಹಲಿಗಳಾಗಿ ನೋಡಬೇಕೆನ್ನುವುದು ಈ ಕಾರಣಕ್ಕೆ ಮಹತ್ವದ ವಿಷಯವಾಗಿದೆ. ನದಿಯ ಮೇಲೆ ನಡೆವ ದೋಣಿಯನ್ನು ಎಚ್ಚರದಿಂದ ನೋಡಿ; ರೈಲೊಂದು ಶಿಳ್ಳು ಹಾಕುತ್ತಾ ಸಾಗುವುದನ್ನು, ಹೊರಲಾರದ ಹೊರೆ ಹೊತ್ತು ಸಾಗುವ ರೈತನನ್ನು ವೀಕ್ಷಿಸಿ, ಹಾಗೆಯೇ ಶ್ರೀಮಂತರ ಠೇಂಕಾರವನ್ನು, ಮಂತ್ರಿ ಮಹೋದಯರ ಅಹಂಕಾರವನ್ನು, ನಾವು ಎಲ್ಲಾ ಬಲ್ಲೆವೆಂಬ ಸರ್ವಜ್ಞರನ್ನು – ಎಲ್ಲವನ್ನೂ ಸುಮ್ಮನೆ ಗಮನಿಸಿ. ಟೀಕಿಸದಿರಿ. ಯಾವ ಕ್ಷಣ ನೀವು ಟೀಕಿಸಲು ತೊಡಗುತ್ತೀರೋ ಆಗ ನಿಮ್ಮ ಮತ್ತು ನಿಮ್ಮ ಕಾಣ್ಕೆಯ ನಡುವೆ ಕಂದರ ಹುಟ್ಟಿಕೊಳ್ಳುತ್ತದೆ. ಗೋಡೆ ಏಳುತ್ತದೆ. ನಿರುದ್ದೇಶದಿಂದ ಕಾಣುವಾಗ, ನಿಮ್ಮ ಮತ್ತು ನೀವು ಕಾಣುವ ಜನರ ಮತ್ತು ಜಗತ್ತಿನ ಮಧ್ಯೆ ನೇರ ಸಂಬಂಧವೇರ್ಪಡಬಲ್ಲದು. ಯಾವ ಬಗೆಯ ವಿಮರ್ಶೆ, ಟೀಕೆ, ನಿರ್ಣಯಗಳಿಲ್ಲದೆ ಸೂಕ್ಷ್ಮವಾಗಿ ಗಮನಿಸಿ. ಆಗ ನಿಮ್ಮ ಯೋಚನಾಕ್ರಮ ಅಸದೃಶ್ಯ ಸಮಾನ ಕರಾರುವಕ್ಕಾಗಿರುತ್ತದೆ. ಆಗ ಮಾತ್ರ ನೀವು ಸದಾ ಕಲಿಯಬಲ್ಲವರಾಗಿರುತ್ತೀರಿ.

ನಿಮ್ಮ ಸುತ್ತಾ ಹುಟ್ಟು-ಸಾವು ಇದೆ. ಹಣಕ್ಕಾಗಿ, ಅಧಿಕಾರಕ್ಕಾಗಿ, ಸ್ಥಾನಮಾನಕ್ಕಾಗಿ ಎಡೆಬಿಡದೆ ಜಗಳ ನಡೆದಿದೆ. ಕೊನೆಯಿರದ ಇಂಥ ಪ್ರಕ್ರಿಯೆಯನ್ನು ನಾವು ಬದುಕೆಂದು ಕರೆಯುತ್ತೇವೆ. ನೀವು ಎಳೆಯ ಹುಡುಗರಾಗಿದ್ದರೂ ಒಮ್ಮೊಮ್ಮೆ "ಏನಿದೆಲ್ಲಾ" ಎಂದು ಆಶ್ಚರ್ಯರಾಗುತ್ತೀರಲ್ಲವೆ? ನೋಡಿ, ನಾವೆಲ್ಲಾ ಸದಾ ಸಿದ್ಧ ಉತ್ತರಗಳನ್ನು ಬಯಸುತ್ತೇವೆ. ಇದೆಲ್ಲಾ ಏನು ಎನ್ನುವುದನ್ನು ನಮಗೆ ಯಾರಾದರೂ ಹೇಳಬೇಕು. ಅದಕ್ಕಾಗಿ ರಾಜಕೀಯ, ಧಾರ್ಮಿಕ ಪುಸ್ತಕಗಳನ್ನು ಹೆಕ್ಕಿಕೊಂಡು, ಕಣ್ಣಲ್ಲಿ ಕಣ್ಣಿಟ್ಟು ಓದುತ್ತೇವೆ. ಇದೇನು ಹೇಳಿ ಎಂದು ಕಂಡಕಂಡವರನ್ನು ಕೈ ಮುಗಿದು ಯಾಚಿಸುತ್ತೇವೆ. ಆದರೆ ಯಾರೂ ಹೇಳಲಾರರು; ಬದುಕೆಂದರೇನು ಎನ್ನುವುದನ್ನು ಯಾವ ಪುಸ್ತಕವೂ ತಿಳಿಸಿಕೊಡಲಾರದು. ಇನ್ನಾವ ದಾರಿಯಿಂದಲೂ ಅದರ ಅರ್ಥ ಬಗೆಯುವ ಸಾಧ್ಯತೆಗಳೇ ಇಲ್ಲ. ಯಾವ ಬಗೆಯ ಪ್ರಾರ್ಥನೆಗಳಾಗಲಿ ಅದರ ಒಗಟು ಬಿಡಿಸಲಾರವು. ಬದುಕು ಎಂದರೇನು ಎನ್ನುವುದನ್ನು ನಾನು ಮತ್ತು ನೀವು; ನಮಗೆ ನಾವೇ ಅರ್ಥಮಾಡಿಕೊಳ್ಳಲು ಮಾತ್ರ ಸಾಧ್ಯವಿದೆ.

ಇದು ನೀವು ಯಾವಾಗ ಜೀವಂತವಾಗಿರುತ್ತೀರೋ, ಎಚ್ಚರದಿಂದ, ಅನಿಮಿಷ ದೃಷ್ಟಿಯವರಾಗಿರುತ್ತೀರೋ, ಜ್ಞಾತೃವಾಗಿರುತ್ತೀರೋ, ಎಲ್ಲದರ ಬಗ್ಗೆ ಎಲ್ಲಿಲ್ಲದ ಕುತೂಹಲಪೂರ್ಣ ಆಸಕ್ತಿಯಿಟ್ಟುಕೊಂಡಿರುತ್ತೀರೋ, ಆಗ ಮಾತ್ರ ಬದುಕು

ಏನು ಅನ್ನುವುದನ್ನ ಶೋಧಿಸಬಲ್ಲವರಾಗುತ್ತೀರಿ. ಸದಾ ಸಂತೋಷದಿಂದ ಇರಬಲ್ಲದು ಹೇಗೆಂಬುದನ್ನು ಅರಿಯಬಲ್ಲವರಾಗಿರುತ್ತೀರಿ.

ಈ ಜಗತ್ತಿನಲ್ಲಿ ಬಹಳ ದುಃಖಿಗಳು. ಅವರು ಯಾಕೆ ದುಃಖಿಗಳೆಂದರೆ ಅವರ ಹೃದಯದಾಳದಲ್ಲಿ ಪ್ರೀತಿಕಾರಂಜಿ ಬತ್ತಿಹೋಗಿಬಿಟ್ಟಿದೆ. ನಿಜವಾದ ಪ್ರೀತಿ ನಿಮ್ಮ ಮತ್ತು ನಿಮ್ಮ ಕಂಗಳೆದುರಿನ ಜಗತ್ತಿನ ನಡುವೆ ಯಾವ ಅಡ್ಡ ಗೋಡೆಗಳೂ ಇಲ್ಲದಿದ್ದಾಗ ಉದ್ಭವವಾಗಬಲ್ಲದು. ನದಿಯೊಂದರಲ್ಲಿ ತೇಲುವ ದೋಣಿಯನ್ನು, ಅದರ ಸೊಬಗನ್ನು ಕುರಿತು ಸಂತೋಷಪಡುವಂತೆ, ನಾವು ಭೇಟಿ ಮಾಡುವ, ಕಾಣುವ ವ್ಯಕ್ತಿಗಳನ್ನು ಗಮನಿಸಿ ಸಂತೋಷಪಡಬಹುದಲ್ಲವೆ?

ಜಗತ್ತು ಹೇಗಿದೆಯೋ ಹಾಗೆ ಕಾಣುವಲ್ಲಿ ನಿಮ್ಮ ಪೂರ್ವಗ್ರಹದ ಮೋಡಗಳು ಅಡ್ಡ ಬರದಂತೆ ನೋಡಿಕೊಳ್ಳಿ, ಸುಮ್ಮನೆ ನಿರ್ಮಲ ಮನಸ್ಸಿನಿಂದ, ನಿರುದ್ದೇಶದಿಂದ ದರ್ಶಿಸಿರಿ. ಇಂಥ ದರ್ಶನದಿಂದ ಮುಗಿಲುಮುಟ್ಟುವ ಮರಗಳು, ಹಾರುವ ಹಕ್ಕಿಗಳು, ನಡೆದಾಡುವ ದುಡಿಯುವ, ಮಂದಹಾಸ ಬೀರುವ ಜನ – ಈ ಎಲ್ಲರೂ ಕೂಡಿ ಏನೋ ಬಂದು ಕ್ರಿಯೆ ನಿಮ್ಮೊಳಗೆ ತನ್ನಿಂದ ತಾನೇ ಘಟಿಸುತ್ತೆ. ಇಂಥ ಅಸಾಮಾನ್ಯ ಅನುಭವ ನಿಮ್ಮೊಳಗೆ ಜನಿಸದಿದ್ದರೆ, ಪ್ರೀತಿಯ ಚಿಲುಮೆ ಚಿಮ್ಮದಿದ್ದರೆ ಬದುಕಿಗೆ ಅರ್ಥವೇ ಇರಲಾರದು. ಅದು ಊನವಾಗುತ್ತದೆ. ಆದ್ದರಿಂದಲೇ ಶಿಕ್ಷಕನಾದವನು ಸುತ್ತಣ ಸಂಗತಿಗಳ, ವಿದ್ಯಮಾನಗಳ, ಮಹತ್ವಗಳನ್ನು ತಿಳಿಸಿಕೊಡುವ ಅವಶ್ಯಕತೆಯನ್ನು ಮನಗಾಣಬೇಕೆಂಬುದು ಮಹತ್ವದ ವಿಷಯವಾಗಿದೆ.

(ಸಾಭಾರ : ಶೂದ್ರ)

ಪ್ರತಿಯೊಂದೂ ತನ್ನದೇ ಆದ ಸೌಂದರ್ಯವನ್ನು ಹೊಂದಿರುತ್ತದೆ ಆದರೆ ಪ್ರತಿಯೊಬ್ಬರೂ ಅದನ್ನು ನೋಡುವುದಿಲ್ಲ.

– ಕನಫ್ಯೂಷಿಯಸ್

* * *

ಒಳ್ಳೆಯ ಆಲೋಚನೆ ಮತ್ತು ಒಳ್ಳೆಯ ಹೃದಯದ ಜೋಡಿ ಎಂದಿಗೂ ಅಜೇಯ.

– ನೆಲ್ಸನ್ ಮಂಡೇಲಾ

* * *

ನಾವು ಏನನ್ನು ಪಡೆಯುತ್ತೇವೋ ಅದರಿಂದ ನಮ್ಮ ಬದುಕು ಸಾಗುತ್ತದೆ; ನಾವು ಏನನ್ನು ಕೊಡುತ್ತೇವೋ ಅದರಿಂದ ನಮ್ಮ ಜೀವನ ರೂಪಿತವಾಗುತ್ತದೆ.

–ವಿನ್‌ಸ್ಟನ್ ಚರ್ಚಿಲ್

ತಂತ್ರಜ್ಞಾನದ ಸಾಧಕ ಬಾಧಕಗಳು

– ಜಿ.ಎಸ್. ಮಾಥೂರ್. ಅನುವಾದ : ನೀಲತ್ತಹಳ್ಳಿ ಕಸ್ತೂರಿ

ಅತಿಯಾದ ತಂತ್ರಜ್ಞಾನಾಭಿವೃದ್ಧಿಯು ಮನುಷ್ಯ ದೈಹಿಕವಾಗಿಯೂ, ಮಾನಸಿಕವಾಗಿಯೂ ರೋಗಿಷ್ಠವಾಗುವಂಥ ವಾತಾವರಣವನ್ನು ಸೃಷ್ಟಿಸಿದೆ. ಅಭಿವೃದ್ಧಿ ಮತ್ತು ಬೆಳವಣಿಗೆಯ ಹುಚ್ಚು ಹಿಡಿದ ಅರ್ಥ ವ್ಯವಸ್ಥೆ, ಉತ್ಪಾದನೆಯನ್ನು ಹೆಚ್ಚಿಸಲು ತನ್ನ ಸಕಲ ಉನ್ನತ ತಂತ್ರಜ್ಞಾನವನ್ನೂ ನಿರಂತರವಾಗಿ ಪ್ರಯೋಗ ಮಾಡುತ್ತಿದೆ. ಇಂಥ ವ್ಯವಸ್ಥೆಯ ಅನಿವಾರ್ಯ ಶಿಶುಗಳೇ ಇಂದಿನ ಎಲ್ಲ ಸಮಸ್ಯೆಗಳು.

ಜೊತೆಗೆ ನಮ್ಮ ನೈಸರ್ಗಿಕ ವಾತಾವರಣಕ್ಕೆ ಆಧಾರವಾದ ಹಾಗೂ ನಮ್ಮ ಇರವಿಗೇ ಮೂಲಾಧಾರವಾದ ಪರಿಸರಕ್ರಮವನ್ನು ಛಿದ್ರಗೊಳಿಸಿ ಹಾಳುಗೆಡವುತ್ತಿದೆ ತಂತ್ರಜ್ಞಾನ. ಇಲ್ಲಿ ಅಣುಶಕ್ತಿಯ ಮೇಲಿನ ಹೆಚ್ಚು ಅವಲಂಬನ ಮತ್ತು ಪ್ರಾಮುಖ್ಯತೆ ತಲ್ಲಣಗೊಳಿಸುವಂಥದು. ಅಣು ತ್ಯಾಜ್ಯದ ವಿಲೇವಾರಿ ತಜ್ಞರಿಗೆ ಗಂಭೀರ ಸವಾಲಾಗಿದೆ. ಸಾವಿರಾರು ಪೀಳಿಗೆಗಳಿಗೆ ಇಂಥ ಮಾರಕ ವಾರಸಿಕೆಯನ್ನು ಬಿಟ್ಟು ಹೋಗಲು ನಮಗೆ ಯಾವ ನೈತಿಕ ಹಕ್ಕಿದೆ? ಈ ಅಣುವಿಕಿರಣ ಕಸದಿಂದಾಗಿ ೨೦೨೦ರ ನಂತರ ಸುಮಾರು ೫೦ ವರ್ಷ ಪ್ರಾಣಾಂತಿಕ ಶ್ವಾಸಕೋಶ ಕ್ಯಾನ್ಸರ್ ಉಂಟಾಗಬಹುದೆಂದು ಅಂದಾಜಾಗಿದೆ.

ಮನುಕುಲದ ಮುಂದೆ ಇರುವ ಸಮಸ್ಯೆಗಳು ಕೇವಲ ವಿಜ್ಞಾನ ತಂತ್ರಜ್ಞಾನಗಳಿಂದಲೇ ಬಗೆಹರಿಯುವಂಥವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ರಾಕ್ಷಸಾಕಾರವನ್ನು ತಳೆಯುತ್ತಿರುವ ಈ ಸಮಸ್ಯೆಗಳನ್ನು ಬಿಡಿಸಲು ರಾಜಕೀಯ ಇಚ್ಛಾಶಕ್ತಿ; ರಾಜಕೀಯ ಕ್ರಿಯೆ ಹಾಗೂ ಜನಜಾಗೃತಿ ಅತ್ಯವಶ್ಯ.

ಮಾನವನನ್ನು ಮತ್ತು ಪರಿಸರವನ್ನು ಅಪಾಯಕ್ಕೆ ಈಡು ಮಾಡುವ ವಿಧಾನಗಳನ್ನು ನಿವಾರಿಸಲು ಕೇವಲ ಹೊರಲಕ್ಷಣಗಳ ಚಿಕಿತ್ಸಾ ಕ್ರಮಗಳನ್ನು ಒತ್ತಿ ಹೇಳಲಾಗುತ್ತಿದೆಯೆ ವಿನಃ. ಮೂಲಭೂತವೂ ದೀರ್ಘದರ್ಶಿಯೂ ಆದ ಕ್ರಮಗಳ ಬಗ್ಗೆ ಗಮನವೀಯುತ್ತಿಲ್ಲ. ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೊರಡುವುದಕ್ಕಿಂತ ಸಮಸ್ಯೆ ಬಾರದಂತೆಯೆ ಎಚ್ಚರ ವಹಿಸುವುದು ಉತ್ತಮ.

ಅಭಿವೃದ್ಧಿಶೀಲ ದೇಶಗಳಲ್ಲಿನ ಬುದ್ಧಿವಂತರು, ಕುಲೀನರು. ನಿರ್ಣಯಕಾರರು ಮತ್ತು ರಾಜಕೀಯ ನಾಯಕರು ವಿದೇಶಿ ಶಿಕ್ಷಣ ಪಡೆದು ಪಾಶ್ಚಿಮಾತ್ಯ ವಿಚಾರಗಳನ್ನು, ತಂತ್ರಜ್ಞಾನವನ್ನು ಅವಲಂಬಿಸಿ ತಮ್ಮದೇ ಸ್ವಂತ ಸಾಮಾಜಿಕ–ಸಾಂಸ್ಕೃತಿಕ ನೆಲೆಗಳಿಂದ ದೂರವಾದರೆ ಮತ್ತು ಆ ದೇಶಗಳಲ್ಲಿಯೆ ಸುಲಭವಾಗಿ ಒಪ್ಪಿತವಾಗದಿರುವ ಆಧುನಿಕ ವಿಧಾನಗಳನ್ನು ಬಲವಂತವಾಗಿ ನಮ್ಮ ದೇಶಗಳಲ್ಲಿ ಹೇರಲು ಯತ್ನಿಸಿದರೆ ಸಮಸ್ಯೆ ಮತ್ತೂ ಗಂಭೀರವಾದೀತು.

ಇಲ್ಲಿದೆ ವಿಜ್ಞಾನ–ತಂತ್ರಜ್ಞಾನಗಳಿಗೆ ಗುಲಾಮರಾಗುವ ಅಪಾಯ. ನೊಬೆಲ್ ಪುರಸ್ಕೃತ ಡಾ॥ ಜಾರ್ಜ್ ವಾಲ್ಡ್ ಹೇಳಿದರು, "ಭೂಮಿಯ ಮೇಲೆ

ಜೀವರಾಶಿ ಮೂರು ಸಾವಿರ ದಶಲಕ್ಷ ವರ್ಷದಿಂದ ಇದೆ. ಸುಮಾರು ಹತ್ತು ಸಾವಿರ ವರ್ಷ ನಾಗರಿಕತೆ ಬೆಳೆದಿದೆ. ಕೈಗಾರಿಕಾ ಕ್ರಾಂತಿ ಆಗಿರುವುದು ಕೇವಲ ೨೦೦ ವರ್ಷದಿಂದ ಈಚೆ ಅಷ್ಟೆ. ಅದು ನಮ್ಮ ಜೀವಜಾತಿಯನ್ನು ಸರ್ವನಾಶದ ಅಂಚಿಗೆ ತಂದು ನಿಲ್ಲಿಸಿದೆ."

ವಿಜ್ಞಾನ-ತಂತ್ರಜ್ಞಾನಗಳ ಬಹುಪಾಲು ಸಂಶೋಧನೆ ಸೈನಿಕ ಉದ್ದೇಶದ್ದೇ. ಅಂತರಿಕ್ಷಯಾನಕ್ಕೆ ಸಂಬಂಧಿಸಿದ ಚಟುವಟಿಕೆಗಳು, ಅಮೆರಿಕಾದಲ್ಲಿ ಮತ್ತು ರಷ್ಯಾದಲ್ಲಿ ಶೇ ೭೦-೭೫ ರಷ್ಟು ಸೈನಿಕ ಉದ್ದೇಶಕ್ಕಾಗಿಯೆ ಎನ್ನಲಾಗಿದೆ. ನಾಗರಿಕ ಕಾರ್ಯ ಒಂದು ಉಪಉತ್ಪನ್ನ ಅಷ್ಟೆ. ಮಾನವ ಜೀವಿಗಳನ್ನು ವಿಕಿರಣ ಪ್ರಯೋಗಗಳಲ್ಲಿ ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ ಎಂದು ಇತ್ತೀಚೆಗೆ ವಿಜ್ಞಾನಿಗಳು ಮತ್ತು ತಂತ್ರಜ್ಞರು ಬಯಲು ಮಾಡಿರುವ ವಿಷಯ ಎದೆ ನಡುಗಿಸುವಂಥದು.

ಪ್ರತಿಯೊಂದು ಯುಗದಲ್ಲೂ ಒಂದಲ್ಲ ಒಂದು ಸಿದ್ಧಾಂತದ ಹೆಸರಿನಲ್ಲಿ ಮಾನವ ಶೋಷಣೆ ನಡದೇ ಇದೆ. ಈ ಯುಗದಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಶೋಷಣೆಯ ಸಾಧನಗಳು. ಅವು ಮನುಕುಲದ ಅಂತರಾತ್ಮದ ಸದ್ದಡಗಿಸುತ್ತಿವೆ. ತಂತ್ರಜ್ಞಾನ ಮಾನವನ ಹತೋಟಿಯಲ್ಲಿರಬೇಕು. ತಾನೇ ಮನುಕುಲವನ್ನು ಗುಲಾಮನನ್ನಾಗಿ ಮಾಡಿಕೊಳ್ಳಬಾರದು. "ವಿಜ್ಞಾನಿಗಳು ಎಂದಿಗೂ ಜಗತ್ತಿನಿಂದ ಹೊರತಾಗಿ ಇರುವಂತಿಲ್ಲ. ಇವರು ಸಮಾಜದ ಅಂಗ. ಇಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವಕ್ಕೆ ಒಳಗಾದವರು. ಇಲ್ಲಿ ಒಂದು ರಾಜಕೀಯ ಮತ್ತು ನೈತಿಕ ಪ್ರಶ್ನೆ ಏಳುತ್ತದೆ. ವಿಜ್ಞಾನಿಗಳ ಉದ್ದೇಶ ಏನು, ಅವರ ಕಾರ್ಯದ ಉದ್ದೇಶ ಏನು?"

ವ್ಯಕ್ತಿಯ ಘನತೆ ಸಾತಂತ್ರ್ಯದ ತಿರುಳು. ಅದನ್ನೇ ಭಾವ ರಹಿತವನ್ನಾಗಿ ನಾಶ ಮಾಡಲು ಹೊರಟಂತಿದೆ ವಿಜ್ಞಾನ, ತಂತ್ರಜ್ಞಾನದ ಮುನ್ನಡೆ.

ಈಗ ನಿರ್ಣಾಯಕ ಸಮಯ ಬಂದಿದೆ. ಕೆಟ್ಟದನ್ನು ಅಡಗಿಸಲು ಮಾನವನ ಸಮಸ್ತ ಒಳಿತೂ ಸಜ್ಜಾಗಬೇಕು. ದಡ್ಡತನ ಮತ್ತು ವಿಚಾರಾಂಧತೆಗಳನ್ನು ವಿವೇಕ ಮತ್ತು ಜ್ಞಾನ ಗೆಲ್ಲಬೇಕು. ಸ್ವಾರ್ಥ ದೃಷ್ಟಿಯಿಂದ ಸುಳ್ಳು ನಿರ್ಣಯಕ್ಕೆ ಬರುವವರಿಂದ ದೂರವಾಗಬೇಕು.

ತಂತ್ರಜ್ಞಾನದ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ನಿಜವಾದ ರೀತಿಯಲ್ಲಿ ಪರಿಶೀಲಿಸಬೇಕು. ಅವರ ವಿಚಾರಗಳನ್ನು ಎಷ್ಟೋ ಸಲ ತಪ್ಪಾಗಿ ಅರ್ಥೈಸಲಾಗಿದೆ. 'ಹಿಂದ್‌ಸ್ವರಾಜ್' ಪುಸ್ತಕದಲ್ಲಿ ಹೇಳಿರುವ ಅವರ ಈ ಮಾತು ಇದಕ್ಕೆ ಕಾರಣ:-

"ಯಂತ್ರಗಾರಿಕೆ ಆಧುನಿಕ ನಾಗರಿಕತೆಯ ಮುಖ್ಯ ಪ್ರತೀಕ. ಅದು ಪಾಪದ ಪ್ರತಿನಿಧಿ." ಅವರು ಮತ್ತೂ ಹೇಳಿದರು-"ಯಂತ್ರ ಹುತ್ತದಂತೆ. ಅದರಲ್ಲಿ ಒಂದು ಹಾವು ಇರಬಹುದು. ನೂರು ಹಾವೂ ಇರಬಹುದು. ಯಂತ್ರಗಾರಿಕೆ ಬಗ್ಗೆ ಒಂದು ಒಳಿತನ್ನೂ ನಾನು ಕಾಣಲಾರೆ. ಅದರ ಕೆಡಕುಗಳ ಮೇಲೆ ಪುಸ್ತಕಗಳನ್ನೇ ಬರೆಯುಬಹುದು."

ತನ್ನ ಗರ್ಭದಲ್ಲಿ ಅಪರಿಮಿತ ತಂತ್ರಜ್ಞಾನ ಅಡಗಿಸಿಟ್ಟುಕೊಂಡಿರುವ ಅಪಾಯದ ಬಗ್ಗೆ ಮಾನವನಿಗೆ ಎಚ್ಚರಿಕೆ ನೀಡಲು ಹೇಳಿದ ಮಾತು ಇದು.

ಗಾಂಧೀಯವರನ್ನು ತರ್ಕ ವಿರೋಧಿ, ಅಭಿವೃದ್ಧಿ ವಿರೋಧಿ, ಆಧುನಿಕತೆಯ ವಿರೋಧಿ ಎಂದು ದೂಷಿಸಲಾಗಿದೆ. ಅಹಿಂಸಾ ವ್ಯವಸ್ಥೆಗಾಗಿ ಇಡೀ ಬದುಕನ್ನೇ ಮೀಸಲಿಟ್ಟ ವ್ಯಕ್ತಿಯ ಬಗ್ಗೆ ಹೀಗೆನ್ನುವುದು ಅನ್ಯಾಯ. ನೀವು ಪೂರಾ ಯಂತ್ರ ವಿರೋಧಿಯೆ ಎಂದು ಅವರನ್ನು ಪ್ರಶ್ನಿಸಿದಾಗ, ಅವರು ಹೇಳಿದರು ; "ಹಾಗೆನ್ನುವುದು ನನ್ನ ವಿಚಾರಗಳನ್ನು ಅಪಹಾಸ್ಯ ಮಾಡಿದಂತೆ. ಯಂತ್ರಕ್ಕೆ ನಾನು ವಿರೋಧಿ ಅಲ್ಲ. ಆದರೆ ಅದು ನಮ್ಮ ಮೇಲೆ ಸವಾರಿ ಮಾಡುವುದಕ್ಕೆ ನಾನು ಪೂರಾ ವಿರೋಧಿ."

ಸತ್ಯ-ಅಹಿಂಸೆಗಳಿಗೆ ಬದ್ಧರಾಗಿದ್ದ ಗಾಂಧೀಜಿ, ತಾಂತ್ರಿಕ ಅಭಿವೃದ್ಧಿಗೆ ಹೊಸ ದಿಕ್ಕನ್ನು ತೋರಿಸಲು ಇಚ್ಛಿಸಿದರು.

ಅವರು ಹೇಳಿದರು, "ವಿಶೇಷ ಸವಲತ್ತು ಮತ್ತು ಸ್ವಾಮ್ಯ ನನಗೆ ಹಿಡಿಸದು. ಜನಸ್ತೋಮಕ್ಕೆ ಎಟುಕದ್ದು ನನಗೆ ನಿಷಿದ್ಧ ಅಷ್ಟೆ" ಅವರು ಬಯಸಿದ್ದು ತುಂಬ ಸರಳವಾದ ಪ್ರಾಥಮಿಕವಾದ ಯಂತ್ರವನ್ನು. ಜನಕೋಟಿಯ ಮನೆ ಮನೆಯಲ್ಲೂ ಇರಬಹುದಾದ ಯಂತ್ರವನ್ನು. ಸರ್ವರ ಲಾಭಕ್ಕೆ ಒದಗುವ ಯಂತ್ರಕ್ಕೆ ಸ್ವಾಗತ. ಆದರೆ ಅನೇಕರ ಹಿತವನ್ನು ನಿರ್ಲಕ್ಷಿಸಿ, ಕೆಲವರ ಸಿರಿಗೆ ಮಾತ್ರ ಸಾಧಕವಾಗುವಂಥ ಅಥವಾ ಅನೇಕರ ಉಪಯುಕ್ತ ಪರಿಶ್ರಮವನ್ನು ಕಿತ್ತು ಹಾಕುವಂಥ ಯಂತ್ರಕ್ಕೆ ಅವರ ಯೋಜನೆಯಲ್ಲಿ ಸ್ಥಾನವಿಲ್ಲ.

ನೈಸರ್ಗಿಕ ಶಕ್ತಿಗಳ ಮೇಲಿನ ಹತೋಟಿಯ ದೆಸೆಯಿಂದಾಗಿ ಅಮೆರಿಕಾದಲ್ಲಿ ಪ್ರತಿಯೊಬ್ಬನಿಗೂ ೩೩ ಗುಲಾಮರನ್ನು ಇಟ್ಟುಕೊಳ್ಳವುದು ಸಾಧ್ಯವಾಗಿದೆ. ನಾನು ಹೇಳುತ್ತೇನೆ, ಇದು ೩೩ ಗುಲಾಮರನ್ನು ಇಟ್ಟುಕೊಳ್ಳುವುದಿರಲಿ, ಪ್ರತಿಯೊಬ್ಬರನ್ನೂ ೩೩ ಬಾರಿ ಗುಲಾಮರನ್ನಾಗಿಸುವುದು.

ಮಾನವ ಶ್ರಮಕ್ಕೆ ಯಂತ್ರ ಪೂರಕವಾಗುವುದಿಲ್ಲ ಅಥವಾ ಶ್ರಮದ ದಕ್ಷತೆಯನ್ನು ಹೆಚ್ಚಿಸುವುದಿಲ್ಲ. ಬದಲಾಗಿ ಅದನ್ನೇ ತೆಗೆದು ಹಾಕುತ್ತದೆ. ಇದೇ ಅದರ ಮೊದಲ ಲಕ್ಷಣ. ಯಂತ್ರದ ಒಲದ ವೃದ್ಧಿಗೆ ಮಿತಿಯೇ ಇಲ್ಲ. ಇದು ಎರಡನೆಯ ಲಕ್ಷಣ. ಅದು ತನ್ನದೇ ಆದ ಇಚ್ಛಾಶಕ್ತಿ ಅಥವಾ ಪ್ರತಿಭೆ ಹೊಂದಿರುವಂತೆ ತೋರಿಕೊಳ್ಳುತ್ತದೆ. ಅದು ಮಾನವ ಶ್ರಮಕ್ಕೆ ವಿರೋಧಿ. ಇದು ಮೂರನೆಯ ಲಕ್ಷಣ.

ತಂತ್ರಜ್ಞಾನ ಮುಖ್ಯವಾಗಿ ನಿಂತಿರುವುದು ಶೋಷಣೆಯ ಮೇಲೆ. ಅದು ಯಾವುದೇ ಮೂಲದಿಂದಲೂ ಶೋಷಣೆ ಶೋಷಣೆಯೆ.

"ಪಶ್ಚಿಮದ ರೀತಿಯಲ್ಲೆ ಭಾರತವೂ ಕೈಗಾರಿಕೀಕರಣಗೊಂಡರೆ ದೇವರೇ ಗತಿ. ಒಂದು ಸಣ್ಣ ದೇಶ ಇಂಗ್ಲೆಂಡ್‌ನ ಆರ್ಥಿಕ ಸಾರ್ವಭೌಮತ್ವ ಇಂದು ಇಡೀ ಜಗತ್ತನ್ನೇ ಬಂಧಿಸಿಟ್ಟಿದೆ. ೮೦ ದಶಲಕ್ಷ ಜನರ ಇಡೀ ರಾಷ್ಟವೇ ಶೋಷಣೆಗೆ ಇಳಿದರೆ, ಜಗತ್ತು ಮಿಡತೆಯ ಆಕ್ರಮಣಕ್ಕೆ ಸಿಕ್ಕಿದಂತಾಗುತ್ತದೆ." ಎಂದರು ಗಾಂಧೀಜಿ.

ಕಂಪ್ಯೂಟರ್‌ಗಳ ಮೇಲಿನ ಅವಲಂಬನೆ, ಸಾಫ್ಟ್‌ವೇರ್, ಸ್ವಯಂಚಾಲನೆ, ಕೃತಕ ಬೌದ್ಧಿಕತೆ ಇತ್ಯಾದಿಗಳೇ ಸಕಲವೂ ಆದರೆ, ಮಾನವನ ಅನುಭವ, ಸಾಮರ್ಥ್ಯ, ಬುದ್ಧಿಮತ್ತೆ ಯಾವುದಕ್ಕೂ ಸ್ಥಾನವಿರುವುದಿಲ್ಲ. ಕೊನೆಗೆ ಮಾನವನ

ಮನಸ್ಸೇ ಸ್ಥಗಿತಗೊಂಡರೂ ಆಶ್ಚರ್ಯವಿಲ್ಲ. ಎಲ್ಲ ಸಾಧನ, ಎಲ್ಲ ವಿಧಾನ ಎಲ್ಲವೂ ಹೊರಗಿನಿಂದಲೇ ಬಂದರೆ, ಸ್ಥಳೀಯವಾದುದೆಲ್ಲ ನಾಶವಾದೀತು.

ಗಾಂಧೀಜಿ ಹೇಳಿದರು, "ನಾನು ವಿರೋಧಿಸುವುದು ಯಂತ್ರವನ್ನಲ್ಲ ಯಂತ್ರದ ಹುಚ್ಚನ್ನು, ಶ್ರಮವನ್ನು ಉಳಿಸುತ್ತಲೇ ಹೋದರೆ, ದುಡಿಯುವ ಕೈಗಳಿಗೆ ಏನು ಕೆಲಸ ಉಳಿದೀತು. ನಿರಶನವೇ ಗತಿ. ಸಮಯ ಮತ್ತು ಶ್ರಮದ ಉಳಿತಾಯ ಕೆಲವೇ ಜನರಿಗೆ ದೊರೆತರೆ ಸಾಲದು, ಎಲ್ಲರಿಗೂ ದೊರಕ ಬೇಕು. ಸಂಪತ್ತು ಕೆಲವೇ ಕೈಗಳಲ್ಲಿ ನಿಲ್ಲಬಾರದು. ಎಲ್ಲರ ಕೈಗೂ ಹೋಗಬೇಕು. ಕೆಲವೇ ಜನ ಲಕ್ಷಾಂತರ ಜನರ ಬೆನ್ನು ಏರಿ ಸವಾರಿ ಮಾಡಲು ಇಂದಿನ ಯಂತ್ರ ಸಾಧಕ. ಇದರ ಹಿಂದಿನ ಪ್ರಚೋದನೆ ಶ್ರಮ ಉಳಿಸುವ ಔದಾರ್ಯವಲ್ಲ, ದುರಾಸೆ. ಈ ವಿಚಾರದ ವಿರುದ್ಧವೇ ನನ್ನ ಹೋರಾಟ."

ತಂತ್ರಜ್ಞಾನದ ಬಗ್ಗೆ ಗಾಂಧೀಜಿ ದೃಷ್ಟಿಯ ಅಂಶಗಳು ಹೀಗಿವೆ ಎನ್ನಬಹುದು:-

೧) ಯಂತ್ರ ಮಾನವನ ಉದ್ಯೋಗವನ್ನು ಕಿತ್ತುಕೊಳ್ಳಬಾರದು.

೨) ಹಳ್ಳಿಗಳ ಶೋಷಣೆ ಆಗಬಾರದು.

೩) ಗ್ರಾಮ ಕುಶಲಕರ್ಮಿಯ ಶ್ರಮಭಾರವನ್ನು ತಗ್ಗಿಸಲಿ, ದಕ್ಷತೆಯನ್ನು ಹೆಚ್ಚಿಸಲಿ.

೪) ಮಾನವನ ಮಿತಿಗಳನ್ನು ಕೆಡಿಸಬಾರದು.

೫) ಕೆಲವೇ ಕೈಗಳಲ್ಲಿ ಸ್ವತ್ತು-ಸತ್ತೆಗಳ ಸ್ವಾಮ್ಯ ಸಂಗ್ರಹವಾಗಬಾರದು.

೬) ಭಾರಿ ಬಂಡವಾಳ ಅಥವಾ ಭಾರಿ ಸಂಖ್ಯೆಯ ಉದ್ಯೋಗಿಗಳು ಇದ್ದಲ್ಲಿ, ಅಂತಹ ಉದ್ಯಮ ಸರ್ಕಾರದ ಅಧೀನದಲ್ಲಿರ ಬೇಕು, ಜನಹಿತಕ್ಕಾಗಿಯೆ ನಡೆಯಬೇಕು.

೭) ಮೇಲಾಗಿ ಜೀವನಾವಶ್ಯಕ ವಸ್ತುಗಳ ವಿಷಯದಲ್ಲಿ ಹಳ್ಳಿಗಳನ್ನು ಸ್ವಾವಲಂಬಿಗೊಳಿಸುವಂತಿರಬೇಕು.

ಈಗ ತಂತ್ರಜ್ಞಾನದಿಂದ ಆಸೆಗಿಂತ ಅಂಜಿಕೆಯೆ ಹೆಚ್ಚು. ಅದು ಮಾನವನನ್ನು ಅಮಾನವೀಯಗೊಳಿಸುತ್ತದೆ. ಸಾಮುದಾಯಿಕ ಸಂಬಂಧಗಳನ್ನು ಯಾಂತ್ರಿಕಗೊಳಿಸುತ್ತದೆ.

ಜಿಯಾಫ್ರೇ ಲೀನ್ ಅವರು "ತಮ್ಮ ಶ್ರೀಮಂತ ಜಗತ್ತು, ಬಡಜಗತ್ತು" ಪುಸ್ತಕದಲ್ಲಿ ಬ್ರಿಟನ್‌ನ ವಿಜ್ಞಾನಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಸರ್ ಬರ್ನಾಡ್ ಲೊವೆಲ್ ಅವರ ಈ ಮಾತನ್ನು ಉದಹರಿಸುತ್ತಾರೆ. "ವಿಜ್ಞಾನದ ಆವಿಷ್ಕರಣದಿಂದ ಭೌತಿಕ ಪ್ರಗತಿ ತಾನೇ ತಾನಾಗಿ ಆಗುತ್ತದೆ ಎಂಬುದು ನಮ್ಮ ಕಾಲದ ಒಂದು ದುರಂತ ನಂಬಿಕೆ. ಈಗ ಇರುವ ಮುಖ್ಯ ಪ್ರಶ್ನೆ ಎಂದರೆ, ವಿಜ್ಞಾನವು ಮೌಲ್ಯದ ಗುರಿಯನ್ನು ಸಾಧಿಸುವುದೇ, ವಿನಾಶದ ಹಾದಿಗೆ ತಳ್ಳುತ್ತಿರುವ ಶಕ್ತಿಗಳನ್ನು ಗೆಲ್ಲುವುದೇ? ಎಂಬುದು."

ವಿಜ್ಞಾನ-ತಂತ್ರಜ್ಞಾನಗಳು ಶ್ರೀ ಸಾಮಾನ್ಯನ ಮಟ್ಟಕ್ಕೆ ಬರಬೇಕು. ಆತನ ಸಂಪೂರ್ಣ ವಿಕಾಸಕ್ಕೆ ದಾರಿ ತೋರಬೇಕು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ದಾರಿ ತೋರಬೇಕು.

* * *

ಜನಪದ ಧ್ವನಿ

ಕರ್ನಾಟಕ ರಾಜಕಾರಣ: ಒಂದು ವಿಶ್ಲೇಷಣೆ

ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರದ ನಾಟಕ ಮುಗಿಯಿತು. ಕೊಟ್ಟ ಮಾತಿಗೆ ತಪ್ಪಿದರೆ ದೇವರು ಮೆಚ್ಚುವುದಿಲ್ಲವೆಂದು ದಾಸರು ಹೇಳಿರುತ್ತಾರೆ. ಕುಮಾರ ಸ್ವಾಮಿಯವರು ಕೊಟ್ಟಮಾತಿಗೆ ತಪ್ಪಿದರು. ದೇವರು ಮೆಚ್ಚುವುದಿಲ್ಲ. ಆದರೆ ದೇವೇಗೌಡರು ಮೆಚ್ಚಿದರು. ಶ್ರೀರಾಮುಲು ಮತ್ತು ಜನಾರ್ಧನರೆಡ್ಡಿಯವರು ತಂದೆ ಮತ್ತು ಮಕ್ಕಳ ವಿರುದ್ಧ ಘೋರ ಆಪಾದನೆಗಳನ್ನು ಮಾಡಿದ್ದು ಇದಕ್ಕೆ ಕಾರಣ ಎಂದು ಹೇಳುತ್ತಾರೆ. ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿ ನ್ಯಾಯಾಂಗದ ಮೂಲಕ ಶಿಕ್ಷೆಗೆ ಗುರಿಪಡಿಸಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ ಹಸ್ತಾಂತರಿಸದಿರುವುದಕ್ಕೆ ಇದನ್ನು ನೆಪ ಮಾಡಿಕೊಂಡರು.

ಜೆ ಡಿ ಎಸ್ ಜೊತೆ ಒಪ್ಪಂದ ಮಾಡಿಕೊಂಡಾಗ ಯಡಿಯೂರಪ್ಪನವರು ತಮ್ಮದು ವಿಧಾನ ಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷ. ತಮ್ಮ ಪಕ್ಷದಲ್ಲಿ ಜೆ.ಡಿ.ಎಸ್ ಗಿಂತ ಇಪ್ಪತ್ತು ಮಂದಿ ಹೆಚ್ಚು ಶಾಸಕರಿದ್ದಾರೆ. ಆದುದರಿಂದ ಮೊದಲ ಅವಧಿಯ ಮುಖ್ಯ ಮಂತ್ರಿ ಪದವಿ ತಮಗೇ ದೊರಕಬೇಕೆಂಬ ಷರತ್ತನ್ನು ಹಾಕಬೇಕಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಬದಲಾಗಿ, ಬಿಟ್ಟರೆ ಸಿಕ್ಕಿದ್ದೂ ಹೋದೀತು, ಸಿಕ್ಕಷ್ಟೆ ಲಾಭ ಎಂದು ವ್ಯವಹರಿಸಿದರು. ಈಗ ವಿಶ್ವಾಸ, ವಚನ ಬದ್ಧತೆ ಮುಂತಾದ ಮಾತುಗಳನ್ನಾಡುತ್ತಾರೆ. ಈಗಿನ ರಾಜಕೀಯದಲ್ಲಿ ಇವೆಲ್ಲ ಚಾಲ್ತಿಯಲ್ಲಿ ಇಲ್ಲದ ಸವಕಲು ನಾಣ್ಯಗಳು. ಅಧಿಕಾರ ಲಾಲಸೆಯಲ್ಲಿ ಯಾರಿಗೆ ಯಾರೂ ಕಡಿಮೆ ಇಲ್ಲ.

ವೀರಶೈವ ಸಮಾಜದ ಮುಖಂಡರು ಮಠಾಧಿಪತಿಗಳು ಒಕ್ಕೊರಲಿನಿಂದ ಯಡಿಯೂರಪ್ಪನವರನ್ನು ಬೆಂಬಲಿಸಿದರೆ, ಒಕ್ಕಲಿಗ ಮಠಾಧಿಪತಿಗಳು ಕುಮಾರಸ್ವಾಮಿಯನ್ನು ಬೆಂಬಲಿಸುತ್ತಾರೆ. ಧರ್ಮಪ್ರಚಾರಕರೂ, ಸಮಾಜಸುಧಾರಕರೂ ಆಗಬೇಕಿರುವ ಈ ಸ್ವಾಮೀಜಿಗಳು ತಮ್ಮ ತಮ್ಮ ಜಾತಿಯೊಂದಿಗೆ ಗುರುತಿಸಿಕೊಳ್ಳುವುದು ಒಳ್ಳೆಯದಲ್ಲ.

ಈಗಿನ ಶಾಸನ ಸಭೆಗೆ ಇನ್ನೂ ಇಪ್ಪತ್ತು ತಿಂಗಳು ಇರುವುದರಿಂದ ಶಾಸಕರು ತಮಗೆ ದೊರೆಯುತ್ತಿರುವ ಸೌಲಭ್ಯಗಳನ್ನು ಕಳೆದುಕೊಳ್ಳಲು ಸಿದ್ಧರಿಲ್ಲ. ತಮ್ಮ ಬೆಂಬಲವನ್ನು ಹರಾಜಿಗಿಟ್ಟು ಮುಂದಿನ ಚುನಾವಣೆಗೆ ಸಿದ್ಧವಾಗಬಹುದು. ಜನಗಳಿಗೆ ಎಲ್ಲ ರಾಜಕೀಯ ಪಕ್ಷಗಳಲ್ಲೂ ನಂಬಿಕೆ ಇಲ್ಲದಿರುವುದರಿಂದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯುವುದಿಲ್ಲ. ಪುನಃ ಮಿಶ್ರ ಸರ್ಕಾರಗಳೇ ಬರುತ್ತವೆ. ಈಗ ನಡೆದಿರುವುದೆಲ್ಲವೂ ಪುನರಾವರ್ತನೆಯಾಗುತ್ತದೆ.

ಚುನಾವಣೆಗಳು ಏಕೆ ಇಷ್ಟು ಮುಖ್ಯವಾಗಿವೆ? ಇದಕ್ಕೆ ಅಭ್ಯರ್ಥಿಗಳು ಏಕೆ ಕೋಟಿಗಟ್ಟಲೆ ಖರ್ಚು ಮಾಡುತ್ತಾರೆ? ಚುನಾಯಿತರಾದ ಮೇಲೆ, ಅದರಲ್ಲೂ ಮಂತ್ರಿಗಳಾದರೆ ನಾವು ಚುನಾಯಿಸಿದ ಇವರನ್ನು ಅತಿಮಾನವರನ್ನಾಗಿ ಮಾಡುತ್ತೇವೆ. ಇವರ ದರ್ಶನ ದೈವ ದರ್ಶನವೆಂದು ಭಾವಿಸುತ್ತೇವೆ. ಇವರನ್ನು ಸಾಮಾನ್ಯ ಪ್ರಜೆಗಳಂತೆ ನಾವು ನೋಡಿದಾಗ ಮಾತ್ರ ಸ್ವಲ್ಪ ಸುಧಾರಿಸುತ್ತದೆ. ಪ್ರತಿಯೊಬ್ಬರೂ ಸ್ವಾಭಿಮಾನವನ್ನು ಬೆಳೆಸಿಕೊಳ್ಳಬೇಕು. ಸ್ವಾಭಿಮಾನ, ಸ್ವಾತಂತ್ರ್ಯ ಎರಡೂ ಒಂದೇ. ನಾವು ಸ್ವಾಭಿಮಾನಿಗಳಾಗದಿದ್ದರೆ ಈ ಪ್ರಜಾಪ್ರಭುತ್ವ ವರವಾಗುವ ಬದಲು ಶಾಪವಾಗುತ್ತದೆ.

– ಎ. ವೆಂಕಟರಮಣಶೆಟ್ಟಿ, ಮೈಸೂರು

* * *

ವೇದದಲ್ಲಿ ದೇವತೆಗಳ ಪರಿಚಯ

– ವಿನೋಬಾ

ಅರ್ಯಮಾ

ಅರ್ಯಮಾ ವೇದಗಳಲ್ಲಿ ಸೂರ್ಯಪ್ರತೀಕ. ಸೌರಶಕ್ತಿ ಪ್ರಾಣದ ಮೂಲ ಸ್ರೋತ. ಆದ್ದರಿಂದ ಪ್ರಾಣ ರೂಪದಲ್ಲಿ ಲೀನವಾಗಿರುವ ಪಿತೃಗಳ ಪ್ರತಿನಿಧಿ ಅರ್ಯಮಾ. ಅದು ಆರ್ಯರು ತಿಳಿದಿದ್ದಂಥ ಪೂರ್ವಜ. ಅರ್ಯಮದ ನಿರುಕ್ತಿ ಆರ್ಯರ ಮನಸು ಎಂದಾಗುತ್ತದೆ. ಆರ್ಯರ ಮನಸ್ಸೆಂದರೆ ಉದಾರ ಭಾವನೆಯುಳ್ಳವನು. ಈ ಸಂಜ್ಞೆಯನ್ನು ವೇದವು ಸೃಷ್ಟಿ ದೇವತೆಗಾಗಿ ಕೊಟ್ಟಿದೆ. ಹೊಲ, ಮರ, ನದಿ, ಸೂರ್ಯ, ಚಂದ್ರ ಇತ್ಯಾದಿಗಳ ರೂಪದಲ್ಲಿ ಸೃಷ್ಟಿ ನಿರಂತರವಾಗಿ ಶಕ್ತಿಯನ್ನು ಕೊಡುತ್ತಲೇ ಇರುತ್ತದೆ. ಆದ್ದರಿಂದ ವೇದಗಳು ಅವುಗಳನ್ನು ಉದಾರವೆಂದು ಹೇಳಿದೆ. ಅದರ ಪೋಷಣೆ ಮಾಡಬೇಕು.

ಆಪೋದೇವ್ಷೆ

ಅಪ್ ಗತಿವಾಚಕ, ಪ್ರಾಚೀನ ಕ್ರಿಯಾಪದ. ಅಪ್‌ನ ಬಹುವಚನದ ಅರ್ಥ ಜಲಪ್ರವಾಹ. ಏಕವಚನದ ಅರ್ಥ ಕರ್ಮ.

ಓರ್ವ ಋಷಿಗೆ ಅನಾರೋಗ್ಯವಾಯಿತು. ಆಗ ಅವನು ಸೋಮರಾಜನಿಗೆ ಹೀಗೆ ಹೇಳಿದ, "ಪ್ರಭು, ನಿನ್ನಲ್ಲಿ ಬಹಳಷ್ಟು ವನಸ್ಪತಿಗಳು ತುಂಬಿವೆ, ಹೀಗೆಂದು ನಾನು ಕೇಳುತ್ತಾ ಬಂದಿದ್ದೇನೆ. ಆದ್ದರಿಂದ ನನಗೆ ಯಾವುದಾದರೂ ಔಷಧಿ ಕೊಟ್ಟು ಆರೋಗ್ಯವಂತನನ್ನಾಗಿ ಮಾಡು," ಇದಕ್ಕೆ ಉತ್ತರವಾಗಿ ಸೋಮರಾಜನು ಹೀಗೆ ಹೇಳಿದ ಅಪ್ಸ್ ಮೆ ಸೋಮೋ ಅಬ್ರವೀತ್ ಅಂತರ್‌ವಿಶ್ವನಿ ಭೇ ಶಜಾ ಚ ವಿಶ್ವಶಂ ಭುವಂ (೧೦–೨–೬) ನೀರಿನಲ್ಲಿ ಎಲ್ಲ ವನಸ್ಪತಿಗಳು ತುಂಬಿವೆ. ಆದ್ದರಿಂದ ನೀನು ನೀರಿನ ಉಪಯೋಗ ಮಾಡು. ಕೇವಲ ನೀರಿನಿಂದ ರೋಗಗಳು ಗುಣವಾಗುತ್ತವೆ. ನೀರಿನಲ್ಲಿ ಅಗ್ನಿ ಕೂಡ ಇರಲು ಸಾಧ್ಯ. ಅಂದರೆ ನೀರು ಬಿಸಿ ಕೂಡ ಆಗಬಹುದು. ಒಮ್ಮೆ ಬಿಸಿ ನೀರನ್ನು ತೆಗೆದುಕೊಂಡರೆ ಇನ್ನೊಮ್ಮೆ ತಣ್ಣಗಿನ ನೀರನ್ನು ತೆಗೆದುಕೊಳ್ಳಬೇಕು. ಆಗ ಯಾವುದೇ ಔಷಧಿಯ ಅವಶ್ಯಕತೆಯಿರುವುದಿಲ್ಲ. ಬಿಸಿ ಮತ್ತು ತಣ್ಣಗಿನ ನೀರಿನಲ್ಲಿ ಎಲ್ಲ ವನಸ್ಪತಿಗಳ ಸಾರವಿದೆ. ರೋಗವನ್ನು ನಿವಾರಿಸಲು ಅದಕ್ಕಿಂತ ಹೆಚ್ಚಿನ ಬೇರೆ ಔಷಧಿಯಿಲ್ಲ.

ನೀರಿನಲ್ಲಿ ಅಖಂಡ ಪ್ರವಾಹ, ಪರೋಪಕಾರ, ಕರುಣೆ, ಉದಾರತೆ, ಶೀತಲತೆ–ಈ ಎಲ್ಲ ಗುಣಗಳು ನಮಗೆ ಕಾಣಬರುತ್ತವೆ. ಮನುಷ್ಯ ಎಷ್ಟೇ ಸಂತಪ್ತವಾಗಿರಲಿ ತಣ್ಣೀರಿನ ಸ್ನಾನ ಮಾಡುತ್ತಲೆ ಶಾಂತವಾಗಿ ಬಿಡುತ್ತಾನೆ. ಏಕನಾಥ ಮಹಾರಾಜರು ಕಾಶಿಯಿಂದ ತಮ್ಮ ತಂದೆ–ತಾಯಿಗಳಿಗೋಸ್ಕರ ಗಂಗಾಜಲದ ಕುಡಿಕೆಯನ್ನು ತಂದಿದ್ದರು. ಆದರೆ ಪೈಠಣ್ ಎಂಬ ಊರಿಗೆ ಬಂದ ಮೇಲೆ ಮರಳುಗಾಡಿನಲ್ಲಿ ಬಾಯಾರಿಕೆಯಿಂದ ಸಾಯುತ್ತಿರುವ ಕತ್ತೆಯ ಮೇಲೆ ಆ ನೀರನ್ನು ಸುರಿದರು. ಈ ಬುದ್ಧಿಯನ್ನು ಯಾರು ಕೊಟ್ಟರು? ನೀರೇ ಕೊಟ್ಟಿತು. ನೀವು

ಉದಾರವಾಗಿರಿ ಎಂದು ನೀರೇ ಹೇಳುತ್ತದೆ. ನೀರು ಮನುಷ್ಯನಿಗೆ ಪುಣ್ಯ ಕರ್ಮವನ್ನು ಮಾಡುವ ಪ್ರೇರಣೆಯನ್ನು ಕೊಡುತ್ತದೆ. ಸಂಸ್ಕೃತದಲ್ಲಿ 'ಅಪ್' ಶಬ್ದದ ಅರ್ಥ "ನೀರು" ಮತ್ತು ಎರಡನೆಯ ಅರ್ಥ "ಶ್ರದ್ಧೆ". ಸತ್ಯವು ನೀರಿನಂತಿರಬೇಕೆಂದು ಜ್ಞಾನದೇವರು ಹೇಳಿದರು. ಅಂದರೆ ಅದು ಶರೀರದ ಎಲ್ಲಕ್ಕಿಂತ ಹೆಚ್ಚು ಸೂಕ್ಷ್ಮ ಅವಯವಗಳಾದ ಕಣ್ಣುಗಳ ಗುಡ್ಡೆಗಳನ್ನು ಕೂಡ ಚುಚ್ಚುವುದಿಲ್ಲ. ಅಷ್ಟೂ ಮೃದುವಾಗಿರುತ್ತದೆ. ಇನ್ನೊಂದೆಡೆ ಅದು ಬಂಡೆಯನ್ನೂ ಒಡೆದು ಹಾಕುವಷ್ಟು ಕಠಿಣವಾಗಿರುತ್ತದೆ. ಇದೇ ರೀತಿ ಸತ್ಯವೂ ಕೂಡ. ಒಂದು ಕಡೆ ಅತ್ಯಂತ ಮೃದುವಾಗಿದ್ದು ಜನರಿಗೆ ಸಮಾಧಾನ, ಸಂತೋಷ ಕೊಡುವುದರಲ್ಲಿ ಶೀತಲ ಮತ್ತು ಮೃದುವಾಗಿರಲಿ. ಇನ್ನೊಂದೆಡೆ ಸಂಶಯದ ಭೇದನೆಯಲ್ಲಿ ಅತ್ಯಂತ ಪ್ರಖರವಾಗಿರಲಿ. ಈ ರೀತಿ ಋಷಿಗಳು ನೀರಿನ ಹಿನ್ನೆಲೆಯನ್ನಿಟ್ಟುಕೊಂಡು ಅಸಂಖ್ಯ ಕಲ್ಪನೆಗಳನ್ನು ಮಾಡಿದ್ದಾರೆ.

ಇಂದ್ರ

ದೇವನೆಂದರೆ ಬ್ರಹ್ಮಾಂಡದ ದಿವ್ಯ ಶಕ್ತಿಗಳು. ಪಿಂಡವೆ ಬ್ರಹ್ಮಾಂಡದ ಪ್ರತಿಬಿಂಬ. ಆದ್ದರಿಂದ ಈ ಶಕ್ತಿಗಳು ಇಂದ್ರಿಯಾದಿ ರೂಪದಲ್ಲಿ ಪಿಂಡದಲ್ಲಿ ಇಳಿಯುತ್ತವೆ. ಇದಂ ದ್ರೊ ಹ ವೈ ನಾಮ ಅಂದರೆ ಇದಂ ದ್ರಷ್ಟಾ, ಎಲ್ಲವನ್ನೂ ನೋಡುವವ. ಇಂದ್ರ ಶಬ್ದದ ಪ್ರತ್ಯಕ್ಷ ಅರ್ಥ ವಿಶ್ವದ್ರಷ್ಟಾ, ಅವನ ದರ್ಶನ ಶಕ್ತಿ ಇಂದ್ರಿಯಗಳು.

ಪ್ರಕೃತಿ ಮತ್ತು ಪುರುಷ ಅಥವಾ ಶರೀರ ಮತ್ತು ಆತ್ಮದ ನಡುವೆ ಅನಾದಿ ಕಾಲದಿಂದ ಯುದ್ಧ ನಡೆಯುತ್ತಿದೆ. ವೇದಗಳಲ್ಲಿ ವೃತ್ರ ಮತ್ತು ಇಂದ್ರನ ಯುದ್ಧಗಳ ವರ್ಣನೆಯಿದೆ. ಇದೇ ಸನಾತನ ಯುದ್ಧದ ವರ್ಣನೆ. ವೃತ್ರದ ಅರ್ಥ ಜ್ಞಾನವನ್ನು ಮುಚ್ಚುವಂಥ ಶಕ್ತಿ. ಇಂದ್ರ ಸಂಜ್ಞೆ ಪರೋಕ್ಷ ಸಂಕೇತದ ದ್ಯೋತಕವಾಗಿದೆ. ಇಂದ್ರಿಯಗಳು ಜ್ಞಾನ ಪ್ರಾಪ್ತಿಯ ಬಾಗಿಲುಗಳು. ಜ್ಞಾನವನ್ನು ಮುಚ್ಚುವಂಥ ಮತ್ತು ಜ್ಞಾನದ ದರ್ಶನ ಮಾಡಿಸುವಂಥ ಈ ಎರಡು ಶಕ್ತಿಗಳು ಜಡ ಶರೀರಾತ್ಮಕ ಭೌತಿಕ ಶಕ್ತಿ ಮತ್ತು ಜ್ಞಾನಮಯ ಆತ್ಮಿಕ ಶಕ್ತಿ. ಈ ಎರಡರಲ್ಲಿ ಸತತವಾಗಿ ಜಗಳ ನಡೆಯುತ್ತದೆ. ಮತ್ತು ಮನುಷ್ಯನ ಜೀವನ ಈ ಎರಡರ ಜಗಳದಲ್ಲಿ ಸಿಕ್ಕಿ ಹಾಕಿಕೊಂಡಿದೆ. ಈ ಎರಡು ಪರಸ್ಪರ ವಿರೋಧಿ ತತ್ವಗಳು ಒಂದೇ ಹೃದಯದಲ್ಲಿ ಕೆಲಸ ಮಾಡುತ್ತಿವೆ. ಆದ್ದರಿಂದ ಮನುಷ್ಯನ ಹೃದಯ ಈ ಯುದ್ಧದ ಧರ್ಮಕ್ಷೇತ್ರ-ಕುರುಕ್ಷೇತ್ರ ಆಗಿಬಿಟ್ಟಿದೆ. ವೇದಗಳಲ್ಲಿ ಇಂದ್ರನಿಗಾಗಿ ಪುರಂದರವೆಂಬ ಶಬ್ದ ಬರುತ್ತದೆ. ಪುರಂದರರದ ಅರ್ಥ ನಗರಗಳನ್ನು ದಾರಣ ಮಾಡುವಂಥವನು. ಬಹಳಷ್ಟು ನಗರಗಳು ಅನಾರ್ಯರ ಮೂಲಕ ಎರಡನೆಯವರನ್ನು ಲೂಟಿ ಮಾಡುವುದು. ಅವರ ಶೋಷಣೆ ಮಾಡುವುದು ಹಾಗೂ ಭೋಗಕ್ಕಾಗಿ ನಿರ್ಮಿಸಲ್ಪಟ್ಟಿವೆ. ಆಗ ಇಂದ್ರ ದೇವತೆಯು ನಾನು ನಗರಗಳನ್ನು ವಿದಾರಣ ಮಾಡುವೆನೆಂದು ಹೇಳಿದ. ಶತಂ ಪುರಃ ಅದಾರಿತ್-ಅಂದರೆ ಅವನು ಇಂಥ ನೂರು ನಗರಗಳನ್ನು ಮುರಿದನು.

ಆದ್ದರಿಂದ ಇಂದ್ರನ ಹೆಸರು ಪುರಂದರಃ– ನಗರಗಳನ್ನು ಮುರಿಯುವವನು.

ಮಾನವನ ಜೀವನವೆಂದರೆ ಹರಿಯುತ್ತಿರುವ ತೊರೆ. ನೀರು ಬಂತು, ಹೋಯಿತು. ತೊರೆಯಂತೂ ಹರಿಯುತ್ತಲೇ ಇರುತ್ತದೆ. ಒಂದೊಂದು ತಲೆಮಾರು ಬಂತು, ಹೋಯಿತು. ಮಾನವ ಸಮಾಜ ಯಾವ ಒಂದು ಕಾಲದಲ್ಲಿತ್ತೊ ಅದೇ ಉಳಿದಿದೆ. ವೇದಗಳಲ್ಲಿ ಇದಕ್ಕೆ ಇಂದ್ರ ಸರ್ಗ ಎಂದು ಹೇಳುತ್ತಾರೆ. ಇಂದ್ರನು ಈ ಪ್ರವಾಹವನ್ನು ಹುಟ್ಟಿಸಿದ, ಇದನ್ನು ತಡೆಯಲು ಸಾಧ್ಯವಿಲ್ಲ ಅದು ಹರಿಯುತ್ತಲೆ ಹೋಗುವುದು.

ಉಷಾ

ಉಷಾ! ಸೂರ್ಯೋದಯಕ್ಕೆ ಮುನ್ನ ಆ ದಿವ್ಯ ಪ್ರಭೆ! ಆ ಉಷಾದೇವಿಯ ಗೀತೆಯನ್ನು ಹಾಡುತ್ತಾ ಅತ್ಯಂತ ಖುಷಿಗೊಂಡ ಋಷಿಗಳು ಕುಣಿಯಲು ಪ್ರಾರಂಭಿಸುತ್ತಿದ್ದರು– "ಉಷೆ, ನೀನು ಪರಮೇಶ್ವರನ ಸಂದೇಶವನ್ನು ತರುವಂಥ ದಿವ್ಯದೂತಳು, ನೀನು ಹಿಮಕಣಗಳಿಂದ ಸ್ನಾನಮಾಡಿ ಬಂದಿದ್ದೀಯೆ, ನೀನು ಅಮೃತತ್ವದ ಪತಾಕೆ," ಇಂಥ ಭವ್ಯ ಮತ್ತು ಹೃದಯಸ್ಪರ್ಶಿ ವರ್ಣನೆಯನ್ನು ಋಷಿಗಳು ಉಷೆಯ ಬಗ್ಗೆ ಮಾಡಿದ್ದಾರೆ. ವೈದಿಕ ಋಷಿಗಳು ಹೇಳುತ್ತಾರೆ– "ಪರಮೇಶ್ವರನ ಸಂದೇಶ ತರುವಂಥ ದೂತಳಾಗಿರುವ ನಿನ್ನನ್ನು ನೋಡಿ ಒಂದು ವೇಳೆ ನನಗೆ ಪರಮೇಶ್ವರನ ಪರಿಚಯ ಇಲ್ಲದೆ ಇದ್ದರೂ ಕೂಡ, ಅವನ ಸ್ವರೂಪದ ಜ್ಞಾನವಿಲ್ಲದೆ ಇದ್ದರೂ ಕೂಡ ನನಗೆ ಪರಮೇಶ್ವರನ ಸ್ವರೂಪವನ್ನು ಯಾರು ತಿಳಿಸಬಲ್ಲರು?."

ಉಷಾ ಅಜೀಗರ್ ಭುವನಾನಿ ವಿಶ್ವಾ (೧.೧೮.೩) –ಉಷಾ ಇಡೀ ಜಗತ್ತನ್ನು ಎಚ್ಚರಿಸುತ್ತಾಳೆ. **ಆವಿರ್ಕರ್ ಭುವನಂ ವಿಶ್ವಮುಷಾಃ** (೭.೬.೭.) – ಉಷಾ ದೇವಿಯು ಇಡೀ ಸೃಷ್ಟಿಯನ್ನೇ ಪ್ರಕಟಗೊಳಿಸಿದಳು. ಉಷೆಗೆ ಸ್ಥಾನವನ್ನು ಕೊಡುತ್ತಾ ರಾತ್ರಿ ಹೋಗುತ್ತದೆ. ರಾತ್ರಿಗೆ ವಿರುದ್ಧವಾದ ಬಣ್ಣದವಳಾಗಿದ್ದರೂ ಕೂಡ ಉಷಾ ರಾತ್ರಿಯ ಕನ್ಯಾ! **ಏವಾ ರಾತ್ರ್ಯುಷಸೆ ಯೋನಿಮಾರೈಕ್** (೧.೧೮.೨)

ಬೃಹಸ್ಪತಿ – ಗಣಪತಿ

ವೇದದಲ್ಲಿ ಬೃಹಸ್ಪತಿಯ ಸೂಕ್ತದ ಪ್ರಾರಂಭ ಈ ರೀತಿ ಇದೆ – **ಗಣಾನಂ ತ್ವಾ ಗಣಪತಿಂ ಹವಾಮಹೆ ಕವಿಂ ಕವೀನಾಮುಪ್ರಮ್ ಸ್ತ್ರಾವಸ್ತಮಮ್ ಜ್ಯೇಷ್ಠ ರಾಜಂ ಬ್ರಹ್ಮಾಣಾಂ ಬ್ರಹ್ಮಣಸ್ಪತೆ.**(೨.೪.೧)

ಹೇ, "ಬೃಹಸ್ಪತಿ ನೀನು ಎಲ್ಲ ಗಣಗಳ ಗಣಪತಿಯಾಗಿದ್ದೀಯೆ, ಎಲ್ಲ ಕವಿಗಳ ಕವಿಯಾಗಿದ್ದೀಯೆ." ಬೃಹಸ್ಪತಿಯು ವಾಣಿಯ ಅಧಿದೈವತೆ, ಅಂದರೆ ಅವನನ್ನು ವಾಣಿಯ ದೇವತೆಯೆಂದು ತಿಳಿಯಲಾಗಿದೆ. ಬೃಹಸ್ಪತಿ ಎಂದರೆ ವಾಣಿಯ ಪತಿ. 'ಓಂ' ಬೃಹಸ್ಪತಿಯ ಪ್ರತೀಕವಾಗಿದೆ. ಈ ಮಂತ್ರ ಬ್ರಹ್ಮಣಸ್ಪತಿಗೆ ಗಣಪತಿ ವಿಶೇಷಣ ಕೊಡುತ್ತದೆ ಮತ್ತು ಓಂಕಾರ ಶಬ್ದವು ಬ್ರಹ್ಮದ ಮತೀತವಾಗಿದೆ ಆದ್ದರಿಂದ ಬ್ರಹ್ಮಣಸ್ಪತಿ ಹೀಗೆ ಉಪನಿಷತ್‌ಗಳಲ್ಲಿ ವರ್ಣನೆ ಬರುತ್ತದೆ. ಆದ್ದರಿಂದಲೆ

ಗಣಪತಿಯು ವಾಂಗ್ಮಯದ ಅಧಿಷ್ಠಾತ ದೇವತೆಯೆಂದು ತಿಳಿಯಲಾಗಿದೆ. ಗಣಪತಿಯ ಮೂರ್ತಿಯು ಓಂ ಕಾರದ ಆಕಾರವನ್ನು ಧ್ಯಾನದಲ್ಲಿಟ್ಟುಕೊಂಡೆ ಮಾಡಲಾಗಿದೆಯೆಂದು ಅನೇಕ ಜನರ ಅಭಿಪ್ರಾಯವಾಗಿದೆ. ಓಂಕಾರವನ್ನು ಸೂಚಿಸುವುದಕ್ಕಾಗಿ ಸೊಂಡಿಲನ್ನು ತೋರಿಸಲಾಗಿದೆ. ಜ್ಞಾನೇಶ್ವರ ಮಹಾರಾಜರು ಜ್ಞಾನೇಶ್ವರಿಯ ಪ್ರಾರಂಭದಲ್ಲಿಯೆ ಇದರ ವರ್ಣನೆ ಮಾಡಿದ್ದಾರೆ-

ಚರಣಯುಗಲ॥ ಉಕಾರ ಉದರ ವಿಶಾಲ
ಮಕಾರ ಮಹಾಮಂಡಲ ॥ ಮಸ್ತಕಾಕಾರೆ

ಓಂಕಾರದ ಪ್ರಥಮ ಮಾತ್ರೆಯ ಅಕಾರ ಗಣಪತಿಯ ಎರಡು ಕಾಲುಗಳಿವೆ. ಎರಡನೆಯ ಉಕಾರ ಮಾತ್ರೆ ವಿಶಾಲ ಹೊಟ್ಟೆ ಮತ್ತು ಮೂರನೆ ಮಕಾರ ಮಾತ್ರೆ ಅವನ ದೊಡ್ಡ ತಲೆಯ ಆಕಾರ.

ಬೃಹಸ್ಪತಿಗೆ ಬ್ರಹ್ಮಣಸ್ಪತಿ ಎಂದೂ ಹೇಳುತ್ತಾರೆ. ಬ್ರಹ್ಮಣಸ್ಪತಿ ಎಂದರೆ ಬ್ರಹ್ಮನ ಜ್ಞಾನ ಯಾರಿಗೆದೆಯೊ ಅವನು. ಇವನನ್ನೆ ಯಜ್ಞಪತಿ ಎನ್ನುತ್ತಾರೆ. ಇವನು ದೇವತೆಗಳ ಪುರೋಹಿತ. ಯಾವ ರೀತಿ ದಶರಥನಿಗೆ ವಸಿಷ್ಠನಿದ್ದನೊ ಹಾಗೆ. ಪುರೋಹಿತನೆಂದರೆ ಯಜ್ಞವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದಿರುವವನು. ಬೃಹಸ್ಪತಿಗೆ ದೇವಗುರು ಎಂದೂ ಹೇಳುತ್ತಾರೆ.

ಮರುತಗಣ

ವಿಚಾರವನ್ನು ತಿಳಿಸುವಂಥ ಯಾವುದೋ ಒಂದು ಶಕ್ತಿ ವಿಶ್ವದಲ್ಲಿದೆ. ಆದ್ದರಿಂದ ಸಮಾನ ರೂಪದಿಂದ ವಿಚಾರ ಪ್ರವಾಹಗಳು ಹರಿಯುತ್ತವೆ. ವೇದಗಳಲ್ಲಿ ಇವುಗಳಿಗೆ ಮರುತಗಣ ಎನ್ನುತ್ತಾರೆ. ಇವು ವಾಯುವಿನಿಂದ ಭಿನ್ನ ಸ್ಥೂಲ ಇವೆ. ಮರುತಗಣ ಚಿಂತನಾಯುಕ್ತವಾಗಿವೆ ಮತ್ತು ಹರಿಯುತ್ತವೆ. ಇದರ ಅರ್ಥ ಚಿಂತನೆಯ ಪ್ರವಾಹ ಉಂಟಾಗುತ್ತವೆ. ಮೊದಲಿನಿಂದಲೂ ಅದು ಸತತವಾಗಿದೆ. ಒಂದೊಂದು ಯುಗದಲ್ಲಿ ಭಿನ್ನ ಭಿನ್ನ ಸ್ಥಾನಗಳಲ್ಲಿ ಒಂದೇ ವಿಚಾರ ಅನೇಕರಿಗೆ ಹೊಳೆಯುತ್ತದೆ.

ಹಿಂದಿನ ಕಾಲದಲ್ಲಿ ಕೂಡ ಜಗತ್ತನ್ನು ಜೋಡಿಸುವಂಥ ಸಾಧನಗಳು ಇಲ್ಲದೆ ಇದ್ದಾಗ ಎಲ್ಲ ಕಡೆಗೂ ಧರ್ಮ ಸಂಸ್ಥಾಪಕರು ಹುಟ್ಟಿಕೊಂಡರು. ಏಕೆಂದರೆ ಪರಮೇಶ್ವರನ ಸಂಕಲ್ಪದಿಂದ ಮರುತಗಣವು ಜಗತ್ತಿನಲ್ಲಿ ಹರಿಯುತ್ತವೆ. ಒಂದು ಕಾಲದಲ್ಲಿ ಎಲ್ಲ ಕಡೆಗೂ ಧರ್ಮ ಸಂಸ್ಥಾಪನೆಯ ಕಾರ್ಯವಾದರೆ ಮಧ್ಯಯುಗದಲ್ಲಿ ಎಲ್ಲ ಕಡೆಗೆ ಸಂತರು ಜನ್ಮ ತಾಳಿದರು. ಭಾರತ, ಏಷ್ಯಾ ಮತ್ತು ಯುರೋಪಿನಲ್ಲಿ ಹಿಂದೂ, ಮುಸಲ್ಮಾನ ಹಾಗೂ ಇಸಾಯಿ ಸಂತರು ಜನ್ಮ ತಾಳಿದರು. ಉಪಾಸನೆಯ ವಿಚಾರ, ಧ್ಯಾನ- ಧಾರಣ ಆದಿ ಪ್ರಕ್ರಿಯೆಗಳೆಲ್ಲವು ಜಗತ್ತಿನಲ್ಲಿ ನಡೆದವು ಇದಾದ ನಂತರ ಈ ೨೦೦ ವರ್ಷಗಳಲ್ಲಿ ಎಲ್ಲ ಕಡೆಗೂ ಸ್ವತಂತ್ರತೆಯ ಆಂದೋಲನಗಳಾದವು. ಹೀಗೆ ಇಡೀ ಜಗತ್ತಿನಲ್ಲಿ ಗಾಳಿಯು ಬೀಸುತ್ತದೆ. ಸತ್ಯವಾದ ವಿಚಾರ ಗಾಳಿಯಿಂದಲೆ ಹರಡುತ್ತದೆ.

ಮನುಷ್ಯನಿಗೆ ಪ್ರೇರಣೆ ಯಾವಾಗಲೂ ವ್ಯಕ್ತದಿಂದಲ್ಲ, ಅವ್ಯಕ್ತದಿಂದ

ದೊರೆಯುತ್ತದೆ. ಯಾವ ಕ್ರಿಯೆಗಳು, ಆಂದೋಲನಗಳು ಅಥವಾ ಗಲಾಟೆಗಳು ನಡೆಯುತ್ತವೆಯೊ ಅವೆಲ್ಲವು ವ್ಯಕ್ತದಲ್ಲಿ ಬರುತ್ತವೆ. ಆದರೆ ಮೂಲ ಪ್ರೇರಣೆ ಅವ್ಯಕ್ತದಲ್ಲಿರುತ್ತದೆ. ಎಷ್ಟೋ ಜನರು ಕೇವಲ ವ್ಯಕ್ತವನ್ನೆ ನೋಡುತ್ತಾರೆ. ಆದ್ದರಿಂದ ವಿಶ್ವದಲ್ಲಿ ಯಾವ ರೀತಿಯ ಪ್ರೇರಣೆಗಳು ಕೆಲಸಮಾಡುತ್ತಿವೆ ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ಯಾರು ಇಡೀ ವಿಶ್ವದ ಇತಿಹಾಸದ ಅಧ್ಯಯನ ಮಾಡಿದ್ದಾರೊ ಅವರಿಗೂ ಗೊತ್ತಾಗುತ್ತದೆಂದು ಹೇಳಲಾಗದು. ಅಥವಾ ಯಾರು ಬಹಳಷ್ಟು ಪತ್ರಿಕೆಗಳನ್ನು ಓದಿ ಪ್ರತಿ ದಿನವೂ ಏನು ನಡೆಯುತ್ತಿದೆಯೆಂಬುದರ ತಿಳುವಳಿಕೆಯನ್ನು ಹೊಂದಿರುತ್ತಾರೊ ಅವರಿಗೆ ವಿಶ್ವ ಪ್ರೇರಣೆಯೆಂಬುದೇನು ಎಂದು ಗೊತ್ತಾಗುತ್ತದೆಂದು ಹೇಳಲಾಗದು. ವಿಶ್ವದಲ್ಲಿ ಕೆಲಸ ಮಾಡುತ್ತಿರುವಂಥ ಪ್ರೇರಣೆಗಳು ಮೂಲದಲ್ಲಿ ಅವ್ಯಕ್ತವಾಗಿರುತ್ತವೆ.

ಆ ಅವ್ಯಕ್ತ ಪ್ರೇರಣೆಯ ತಿಳಿವು ಅಥವಾ ಜ್ಞಾನ ಯಾರು ವ್ಯಕ್ತದಗಿಂತ ಹೊರತಾಗಿ ಚಿಂತನೆ ಮಾಡುತ್ತಾರೊ ಅವರಿಗೆ ಆಗುತ್ತದೆ. ಆದ್ದರಿಂದ ಮನುಷ್ಯನು ತನ್ನ ಬುದ್ಧಿ, ಇಂದ್ರಿಯ, ಮನಸ್ಸು, ಶರೀರ, ಬಾಹ್ಯ ಪರಿಸ್ಥಿತಿ ಈ ಎಲ್ಲಕ್ಕಿಂತ ಹೊರತಾಗಿರುವಂಥವರಿಗೆ ಜಗತ್ತಿನಲ್ಲಿ ಎಂಥ ವಿಚಾರಗಳ ಪ್ರವಾಹ ಹರಿಯುತ್ತಿವೆಯೆಂಬುದು ಗೊತ್ತಾಗುತ್ತದೆ, ಮರುತಗಣ ಇಡೀ ವಿಶ್ವದಲ್ಲಿ ಅವ್ಯಕ್ತ ರೂಪದಲ್ಲಿ ಅಲೆಯುತ್ತವೆ ಮತ್ತು ಹೃದಯವನ್ನು ಸ್ಪರ್ಶಿಸುತ್ತವೆಯೆಂಬುದಾಗಿ ವೇದವು ಹೇಳಿದೆ. ತಮ್ಮ ಕೆಲಸವನ್ನು ಅವು ಮಾಡಿಸಿಕೊಳ್ಳುತ್ತವೆ. ಮತ್ತು ಯಾರಿಂದ ಮಾಡಿಸಿಕೊಳ್ಳುತ್ತವೊ ಅವರಿಗೆ ಯಾವ ಪ್ರೇರಣೆಯ ಸ್ಪರ್ಷ ತಮಗಾಗಿದೆ ಮತ್ತು ಯಾವ ಪ್ರೇರಣೆ ತಮ್ಮಿಂದ ಕೆಲಸ ಮಾಡಿಸಿಕೊಳ್ಳುತ್ತಿದೆಯೆಂಬುದು ಕೂಡ ತಿಳಿದಿರುವುದಿಲ್ಲ ಅವರು ಗೊತ್ತಿಲ್ಲದಂತೆಯೆ ಕೆಲಸ ಮಾಡುತ್ತಾ ಹೋಗುತ್ತಾರೆ. ಯಾರಿಗೆ ಈ ಪ್ರೇರಣೆಯ ಜ್ಞಾನವಾಗುತ್ತದೊ ಆ ಮನುಷ್ಯನನ್ನು ಆ ಯುಗದ ಮಟ್ಟಿಗೆ ಋಷಿ ಎಂದು ಕರೆಯಲಾಗುತ್ತದೆ. ಪರಮೇಶ್ವರನ ಕೃಪೆಯಿಂದ ಇಂಥ ಕೆಲ ಋಷಿಗಳು ಮನುಷ್ಯರಲ್ಲಿ ಹುಟ್ಟುತ್ತಾರೆ. ಅವರಿಗೆ ಕ್ರಾಂತ-ದರ್ಶನ, ಆ ತೀರದ ದರ್ಶನ, ಅವ್ಯಕ್ತ ದರ್ಶನ ಮರುತಗಣ ಯಾವ ಪ್ರಕಾರ ಕೆಲಸ ಮಾಡುತ್ತಿದೆಯೆಂಬುದರ ಸ್ಪಷ್ಟ ದರ್ಶನವಾಗುತ್ತದೆ.

ಹೀಗೆ ನಾವೆಲ್ಲರೂ ಒಂದು ಶಕ್ತಿಯ ಕೈಯಲ್ಲಿ ಸಾಧನವಾಗಿದ್ದೇವೆ, ಕಾಲಶಕ್ತಿ, ಕಾಲಕೃಷ್ಣ ನಮ್ಮಿಂದ ಕೆಲಸ ಮಾಡಿಸುತ್ತಾನೆ.

ವರುಣ

ವೇದದಲ್ಲಿ ವರ್ಣನೆಯಿದೆ-

ನೀ ಶ ಶಾದ ಧೃತ ವ್ರತಃ ವರುಣಃ ಪಸ್ತ್ಯಾ ಸ್ವ, ಸಾಮ್ರಾಜ್ಯಾಯ ಸುಕ್ರತಹು (೧.೬.೧೦)

ಪರಮಾತ್ಮನ ಸಾಮ್ರಾಜ್ಯ ಸ್ಥಾಪಿತವಾಗಲಿ ಎಂಬುದಕ್ಕಾಗಿ ಎಲ್ಲರಿಗೋಸ್ಕರ ಉತ್ತಮ ಸಂಕಲ್ಪ ಮಾಡಬೇಕೆಂದು ವರುಣನು ವ್ರತ ಕೈಗೊಂಡಿದ್ದಾನೆ. ಸುಕೃತು ಎಂದರೆ ಉತ್ತಮ ಸಂಕಲ್ಪ.

ಯೊ ಸಾಮ್ ರಾಜ ವರುಣೊ ಯಾತಿ ಮಧ್ಯೆ ಸತ್ಯಾನ್ರುತೆ ಅವಪಸ್ಯಂ ಜನಾನಂ (೭.೪೯.೧೨)

ದೇವರು ವರುಣನಾಗಿ ನೀರಿನಲ್ಲಿರುತ್ತಾನೆ. ಅವನು ರಾಜ ವರುಣ ಸಮುದ್ರದಲ್ಲಿ ಅಧಿಷ್ಠಿತನಾಗಿದ್ದಾನೆ ಮತ್ತು ಮನುಷ್ಯನ ಸತ್ಯ ಹಾಗೂ ಅಸತ್ಯವನ್ನು ನೋಡುತ್ತಿದ್ದಾನೆ.

ಜನರ ನಿಜ ಮತ್ತು ಸುಳ್ಳಿನ ಪರೀಕ್ಷೆಯನ್ನು ಮಾಡುವ ಪರಮಾತ್ಮ ನೀರಿನಲ್ಲಿ ನಿವಾಸ ಮಾಡಿದ್ದಾನೆ. ಕೈಯಲ್ಲಿ ನೀರು ತೆಗೆದುಕೊಂಡು ಹೇಳು ಎಂದು ಹೇಳುತ್ತಾರೆ ಅಂದರೆ ನೀರನ್ನು ಕೈಯಲ್ಲಿ ತೆಗೆದುಕೊಂಡ ಮನುಷ್ಯ ಎಂದೂ ಸುಳ್ಳನ್ನು ಹೇಳಲಾರ. ನೀರಿಗೆ ಇಷ್ಟೊಂದು ಪ್ರತಿಷ್ಠೆ ಬರುವುದಕ್ಕೆ ಕಾರಣ ಇದೇ ಆಗಿದೆ. ಅದು ಸತ್ಯ ಮತ್ತು ಸುಳ್ಳಿನ ಪರೀಕ್ಷೆ ಮಾಡುತ್ತದೆ. ಭಗವಂತನು ವ್ರತಸ್ಥ. ಸೂರ್ಯ ಚಂದ್ರಾದಿಗಳು ನಿಯತ ಸಮಯದಲ್ಲಿ ಉದಯಿಸುತ್ತಾರೆ ಮತ್ತು ನಿಯತ ಸಮಯದಲ್ಲಿ ಅಸ್ತವಾಗುತ್ತಾರೆ. ನಾಳೆ ಇಂಥ ವಿಶೇಷ ದಿನದಲ್ಲಿ ಸೂರ್ಯ ಚಂದ್ರರು ಎಲ್ಲಿರುತ್ತಾರೆ ಎಂಬುದನ್ನು ಕರಾರುವಕ್ಕಾಗಿ ಹೇಳಬಹುದಾದಷ್ಟು ರೀತಿಯಲ್ಲಿ ಅವರು ಚಲಿಸುತ್ತಾರೆ. ಜಗತ್ತಿನಲ್ಲಿ ಇಷ್ಟೊಂದು ವ್ಯವಸ್ಥಿತತೆ ಇದೆ. ಅವನು ಸ್ವಯಂ ಎಷ್ಟೊಂದು ವ್ಯವಸ್ಥಿತನಾಗಿರಬಹುದು, ಎಷ್ಟೊಂದು ವ್ರತಸ್ಥನಾಗಿರಬಹುದು? ವೇದದಲ್ಲಿ ವರುಣ ವ್ರತ ತೆಗೆದುಕೊಂಡು ಕುಳಿತಿದ್ದಾನೆಂಬುದಾಗಿ ವರ್ಣನೆ ಬರುತ್ತದೆ-

ಅದಬ್ಧಾನಿ ವರುಣಸ್ಯ ವ್ರತಾನಿ (೧.೩೪.೬) ವರುಣನ ವ್ರತ ಅನುಲ್ಲಂಘನೀಯ.

ಮೂರು ಪಾಶಗಳಿಂದ ಬಂಧಿಸಲ್ಪಟ್ಟ ಜೀವ ನಾನು ಈ ಪಾಶಗಳಿಂದ ಮುಕ್ತನಾಗಲಿ ಎಂದು ಪ್ರಾರ್ಥನೆ ಮಾಡುತ್ತದೆ.

ವಾಯು

ಆಕಾಶದಲ್ಲಿ ಅನಂತ ಗಾಳಿ ಹರಿಯುತ್ತಿವೆ. ಅವೆಲ್ಲವು ವಾಯ. ವಾಯು ಸತತವಾಗಿ ಹರಿಯುತ್ತಿರುತ್ತದೆ. ವಾತೀತಿ ವಾಯುಃ ಯಾವುದು ಹರಿಯುತ್ತದೊ ಅದು ವಾಯು. ಯಾವುದು ಸದಾ ಗತಿಯುಳ್ಳದ್ದೊ ಅದು ವಾಯು. ಹಿಂದುಸ್ಥಾದಲ್ಲಿ ಕೆಲವು ಗಾಳಿ ಸ್ಥಿರ ಹಿಮಾಲಯದಿಂದ ಬರುತ್ತವೆ, ಇನ್ನೂ ಕೆಲವು ಗಂಭೀರ ಸಾಗರದ ಮೇಲಿಂದ ಬರುತ್ತವೆ. ಈ ಪವಿತ್ರಗಾಳಿ ನಮ್ಮ ಹೃದಯವನ್ನು ಮುಟ್ಟುತ್ತವೆ. ನಮ್ಮನ್ನು ಜಾಗೃತಗೊಳಿಸುತ್ತವೆ. ನಮ್ಮ ಕಿವಿಗಳಲ್ಲಿ ಗುನುಗುನಿಸುವ ಅದು ಭಗವಂತನ ಧೂತವೇ ಆಗಿದೆ. ಪರಮೇಶ್ವರನ ಪ್ರೇಮ ಸಂದೇಶವು ಪ್ರತಿ ಘಳಿಗೆಯೂ ಗಾಳಿಯ ಜೊತೆಗೆ ಬರುತ್ತಿದೆ. ಅದನ್ನು ಕೇಳಬೇಕು.

ವಾಯುವೆಂದರೆ ಜೀವ, ಈ ಅರ್ಥ ಕೂಡ 'ವಾತಿಗಚ್ಛತಿ ಇತಿ ವಾಯುಃ' ಈ ವ್ಯುತ್ಪತ್ತಿಯಿಂದ ಜೀವ ಉಪಾಧಿಯುಕ್ತವಾಗಿ ದೇಹದಿಂದ ದೇಹಾಂತರದಲ್ಲಿ ವಾಸನೆಯ ಅನುರೂಪವಾಗಿ ಹೋಗುತ್ತದೆ. ಆದ್ದರಿಂದ ಅದು ವಾಯು.

(ಮುಂದುವರೆಯುವುದು)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

"ಎಲ್ಲವನ್ನು ಆವರಿಸಿಕೊಂಡಿರುವ ಶಬ್ದಾತೀತ ರಹಸ್ಯಮಯ ಶಕ್ತಿಯೊಂದಿದೆ. ಅದನ್ನು ನಾನು ನೋಡಲಾರೆನಾದರೂ ಅದರ ಅನುಭವ ನನಗಾಗುತ್ತದೆ." – ಗಾಂಧಿ

ಟ್ರಸ್ಟಿಗೆ ಧನ ಸಹಾಯ ಮಾಡುವಂಥ ದಾನಿಗಳೆಲ್ಲರು ಅದನ್ನು ಸ್ವಯಂ ಪ್ರೇರಿತರಾಗಿ ಮಾಡುತ್ತಾರೆ. ದಾನ ಕೊಡಬೇಕೆಂದು ಅವರ ಮೇಲೆ ಯಾವುದೇ ರೀತಿಯ ಒತ್ತಡವನ್ನು ತಂದಿರುವುದಿಲ್ಲ. ದಾನಿಗಳು ಟ್ರಸ್ಟಿಗೆ ಭೇಟಿ ಕೊಟ್ಟಾಗ ಟ್ರಸ್ಟಿನ ಕಾರ್ಯಕ್ರಮಗಳನ್ನು ನೋಡಿ, ಕೇಳಿ, ತಿಳಿದು ನಂತರ ಸ್ವ ಇಚ್ಛೆಯಿಂದ ಸಹಾಯ ಮಾಡುತ್ತಾರೆ. ಈ ಪರಿಪಾಠ ಇಂದಿನಿಂದಲ್ಲ, ಟ್ರಸ್ಟ್ ಪ್ರಾರಂಭವಾದಾಗಿನಿಂದಲೂ ನಡೆದುಕೊಂಡು ಬಂದಿದೆ. ಕೆಲವು ದಾನಿಗಳು ತಾವೇ ನಿಗದಿಪಡಿಸಿಕೊಂಡ ದಿನದ ಸಂದರ್ಭದಲ್ಲಿ ಹಣವನ್ನು ಕಳುಹಿಸುತ್ತಾರೆ. ಆದರೆ ಇಲ್ಲಿ ವಿಶೇಷವಾದ ಸಂಗತಿಯೇನೆಂದರೆ ಅವರಿಗೆ ತಾವು ನಿಗದಿಪಡಿಸಿದ ದಿನದಂದು ಹಣ ಕಳುಹಿಸಲಾಗದಿದ್ದರೆ, ತಾವೆ ದೂರವಾಣಿಯ ಮೂಲಕ ಸಂಪರ್ಕಿಸಿ ತಮ್ಮಿಂದ ಆಗಿರುವ ನಿಧಾನದ ಬಗ್ಗೆ ಬಹುವಾಗಿ ವಿಷಾದ ವ್ಯಕ್ತಪಡಿಸುತ್ತಾರೆ ಮತ್ತು ಟ್ರಸ್ಟಿಗೆ ಆಗಿರಬಹುದಾದ ತೊಂದರೆಗಾಗಿ ಕ್ಷಮೆಯನ್ನು ಕೋರುತ್ತಾರೆ. ಇಂಥ ಸಹೃದಯಿ ಹಾಗೂ ಸಾಮಾಜಿಕ ಕಳಕಳಿಯ ದಾನಿಗಳನ್ನು ಹೊಂದಿರುವುದು ಟ್ರಸ್ಟಿನ ಗೌರವದ ಸಂಗತಿಯಾಗಿದೆ. ಇತ್ತೀಚೆಗೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಮೈಸೂರಿನ ೩೦ ಶಾಲಾ ಮಕ್ಕಳು ಬೀಡು ಬಿಟ್ಟಿದ್ದರು. ಉದ್ದೇಶ್ಯ ಪ್ರಕೃತಿ ಅಧ್ಯಯನ. ಈ ತಂಡದಲ್ಲಿ ಮೈಸೂರು ನಗರದ ಜೆ.ಎಸ್.ಎಸ್ ಪ್ರೌಢ ಶಾಲೆ, ಮಹಾಜನ್ ಹಾಗೂ ಪುಷ್ಕರಣಿ ಪ್ರೌಢಶಾಲೆಯ ಮಕ್ಕಳು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಈ ತಂಡಕ್ಕೆ ಮೊಹನ್ ಮತ್ತು ಸೋಲಂಕಿ ಮಾರ್ಗದರ್ಶಕರಾಗಿದ್ದರು.

ಅಲೆಸ್ಟರ್ ಮೆಂಕೆಂಜೆ ೧೯೯೦ ರಲ್ಲಿ ಟ್ರಸ್ಟಿಗೆ ಸ್ವಯಂ ಸೇವಕನಾಗಿ ಕೆಲಸ ಮಾಡಿದ್ದಂಥ ಯುವಕ. ಈತನು ಲಂಡನ್ ನಗರದಲ್ಲಿ ಒಂದು ಬಹುರಾಷ್ಟೀಯ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾನೆ. ಈಗ ಹಲವಾರು ವರ್ಷಗಳ ನಂತರ ಭಾರತಕ್ಕೆ ಬಂದಿದ್ದಾಗ ಮೇಲುಕೋಟೆಯಲ್ಲಿಯ ತನ್ನ ಸೇವಾ ಕಾರ್ಯಗಳು ನೆನಪಾಗಿದ್ದರಿಂದ ಮೇಲುಕೋಟೆಗೆ ಬಂದು ಎರಡು ದಿನ ಇದ್ದು ಹೋದನು. ಅಲೆಸ್ಟರ್ ೧೯೯೦ರಲ್ಲಿ ಮೇಲುಕೋಟೆಯಲ್ಲಿ ಏರ್ಪಡಿಸಲಾಗಿದ್ದ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಕ್ರಿಯವಾದ ಸ್ವಯಂ ಸೇವಕನಾಗಿ ಕೆಲಸ ಮಾಡಿದ್ದನು.

ಮೈಸೂರಿನ ವೆಂಕಟರಮಣಶೆಟ್ಟರು ಮಕ್ಕಳ ಊಟೋಪಚಾರಕ್ಕಾಗಿ ಹಣವನ್ನು ಕಳುಹಿಸಿದ್ದಾರೆ. ಬೆಂಗಳೂರಿನ ಸ್ನೇಹಿತರಾದ ನೀಲತ್ತಹಳ್ಳಿ ಕಸ್ತೂರಿಯವರು ಕೂಡ ಅಭಿಮಾನಪೂರ್ವಕವಾಗಿ ಹಣ ಕಳುಹಿಸಿದ್ದಾರೆ.

ಸಮುದಾಯದತ್ತ ಕರುಣಾಗೃಹದ ಅಂಗವಾಗಿ ನಡೆಯುತ್ತಿರುವ ಹಿರಿಯ ನಾಗರಿಕರ ಯೋಗಕ್ಷೇಮದ ಪ್ರಯತ್ನವಾಗಿ ಸುಮಾರು ೧೦ ಜನರಿಗೆ ಸರ್ಕಾರದ ವೃದ್ಧಾಪ್ಯವೇತನ ದೊರೆಯಿತು.

ಜನಪದ ನಿಲಯದ ಅಂತರಂಗದಲ್ಲಿ ೪೮

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ತನ್ನ ನಾಲ್ಕೂವರೆ ದಶಕಗಳ ಜೀವನದಲ್ಲಿ ಅನೇಕ ಏರಿಳಿತಗಳನ್ನು ಕಂಡಿದೆ. ಈಗ ಕಳೆದು ಹೋದ ಕಾಲ ಮತ್ತು ಕಾರ್ಯಕ್ರಮಗಳ ಬಗ್ಗೆ ಸಿಂಹಾವಲೋಕನ ಮಾಡಿದಾಗ ನಿರಾಶೆಗೊಳಿಸುವ, ಹತಾಶೆಗೊಳಿಸುವ, ನಿರುತ್ಸಾಹಗೊಳಿಸುವಂಥ ಯಾವುದೇ ಇಳಿತಗಳು ಟ್ರಸ್ಟಿನ ಸಾರ್ವಜನಿಕ ಜೀವನದಲ್ಲಿ ಕಂಡು ಬರುವುದಿಲ್ಲವೆಂಬುದು ಸಮಾಧಾನದ ಸಂಗತಿಯಾಗಿದೆ. ಈ ಅವಧಿಯಲ್ಲಿ ಟ್ರಸ್ಟ್ ತನ್ನ ಆತ್ಮ ವಿಶ್ವಾಸವನ್ನು ಹಾಗೂ ತನ್ನ ಧ್ಯೇಯೋದ್ದೇಶಗಳಲ್ಲಿ ಇನ್ನಷ್ಟು ನಂಬಿಕೆಯನ್ನು ಬೆಳೆಸಿಕೊಂಡು ಬಂದಿತು. ಇದಕ್ಕೆ ಕಾರಣ ಟ್ರಸ್ಟಿನಲ್ಲಿದ್ದಂಥ ಸೌಹಾರ್ದಯುತ ವಾತಾವರಣ. ಅಲ್ಲದೆ ಟ್ರಸ್ಟಿನ ಕಾರ್ಯಕ್ರಮಗಳನ್ನು ಮತ್ತು ಸ್ಥಳದಲ್ಲಿದ್ದುಕೊಂಡು ಕೆಲಸ ಮಾಡುತ್ತಿರುವ ಕಾರ್ಯಕರ್ತರನ್ನು ಅರ್ಥ ಮಾಡಿಕೊಂಡು ಸಹಾಯ ಮಾಡಿದ ಸ್ಥಳೀಯ ಮತ್ತು ಪರಸ್ಥಳೀಯ ದಾನಿಗಳ ಅಭಿಮಾನ ಪೂರ್ವಕವಾದ ಧನಸಹಾಯ ಕೂಡ ಇದಕ್ಕೆ ಕಾರಣವಾಗಿದೆ. ಒಂದು ಸಮಯದಲ್ಲಿ ಟ್ರಸ್ಟಿನ ಅಭಿಮಾನಿಗಳ ಬಳಗದ ಸಂಖ್ಯೆ ಸುಮಾರು ೨೦೦ ರಷ್ಟು ತಲುಪಿತ್ತು. ಇದೆಲ್ಲವು ಸಹಜವಾಗಿ ನಿರ್ಮಿತವಾದ ಬಳಗ. ಒಬ್ಬರ ವಿಶ್ವಾಸ ಇನ್ನೊಬ್ಬರ ವಿಶ್ವಾಸಕ್ಕೆ ಕಾರಣವಾಗುತ್ತಾ ಹೋಗಿ ಬೆಳೆದಂಥ ಬಳಗವಿದು. ಈ ಬಳಗದಲ್ಲಿ ವಿದೇಶದ ನೂರಾರು ಅಭಿಮಾನಿಗಳು ಕೂಡ ಇದ್ದಾರೆ. ಅಂಥ ವಿದೇಶಿ ಅಭಿಮಾನಿಗಳಲ್ಲಿ ಕೆಲವರು ಜಪಾನ್ ದೇಶದವರಾದರೆ ಇನ್ನು ಕೆಲವರು ಇಂಗ್ಲಂಡ್ ದೇಶದವರು ಮತ್ತು ಇನ್ನು ಕೆಲವರು ಫ್ರಾನ್ಸ್ ಮತ್ತು ಯುರೋಪ್ ರಾಷ್ಟ್ರದವರು. ಈ ದೇಶದಿಂದ ಬಂದ ಸ್ವಯಂ ಸೇವಕರು ಟ್ರಸ್ಟಿನಲ್ಲಿ ಸಲ್ಲಿಸಿದ ಸೇವೆ ಟ್ರಸ್ಟಿನ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವಂಥದು. ಈಗ ಇರುವ ಕರುಣಾಗೃಹದ ಕಟ್ಟಡದ ನಿರ್ಮಾಣಕ್ಕೆ ಓರ್ವ ಅಮೆರಿಕನ್ ಮಹಿಳೆಯು ಕೊಟ್ಟ ಧನಸಹಾಯ ಎಂದೆಂದಿಗೂ ಮರೆಯಲಾಗದು. ಈಗ್ಗೆ ಮೂವತ್ತು ವರ್ಷಗಳ ಹಿಂದೆ ಅಷ್ಟು ದೊಡ್ಡ ಕಟ್ಟಡವನ್ನು ಕೇವಲ ಒಂದೂವರೆ ಲಕ್ಷ ರೂಗಳಲ್ಲಿ ಕಟ್ಟಲಾಯಿತು. ಈ ಹಣದಲ್ಲಿ ಸರ್ಕಾರದಿಂದ ದೊರೆತ ಹಣ ಕೇವಲ ೨೫ ಸಾವಿರ ರೂ. ಇನ್ನುಳಿದ ಹಣವನ್ನು ಈ ಅಮೆರಿಕನ್ ಮಹಿಳೆ ಹಾಗೂ ಇನ್ನೂ ಕೆಲವು ಅಭಿಮಾನಿಗಳು ಕೊಟ್ಟಂಥದು. ಉದಾರ ಚರಿತಳಾದ ಈ ಅಮೆರಿಕನ್ ಮಹಿಳಾ ದಾನಿಯ ಹೆಸರು

ಅನಾ–ಗುಯೆರಾ. ಈಕೆ ಅಮೆರಿಕಾದಲ್ಲಿಯ ಸ್ಯಾನ್‌ಪ್ರಾನ್ಸಿಸ್ಕೊದ ರಾಮಕೃಷ್ಣ ಮಠದ ಅಭಿಮಾನಿ. ಗುಯೆರಾ ಭಾರತಕ್ಕೆ ಬಂದಿದ್ದಾಗ ಮೈಸೂರಿನ ರಾಮಕೃಷ್ಣ ಮಠದವರು ಅವರನ್ನು ಮೇಲುಕೋಟೆಗೆ ಕರೆದುಕೊಂಡು ಬಂದು ಟ್ರಸ್ಟಿನ ಪರಿಚಯ ಮಾಡಿ ಕೊಟ್ಟರು. ಆಗ ಆಕೆಗೆ ಸುಮಾರು ೭೦ ವರ್ಷ ವಯಸ್ಸು. ಗುಯೆರಾ ಟ್ರಸ್ಟಿನ ಧ್ಯೇಯೋದ್ದೇಶಗಳನ್ನು ತಿಳಿದು ಆಗ ನಡೆಯುತ್ತಿದ್ದ ಕರುಣಾಗೃಹದ ಚಟುವಟಿಕೆಗಳನ್ನು ನೋಡಿ ಪ್ರಭಾವಿತಗೊಂಡು ಟ್ರಸ್ಟಿನ ಕಾರ್ಯಕ್ರಮಗಳಿಗೆ ಮುಖ್ಯವಾಗಿ ಕಟ್ಟಡ ನಿರ್ಮಾಣಕ್ಕೆ ಸಹಾಯ ಮಾಡುವುದಾಗಿ ಸ್ವಾಮಿ ಪ್ರಬುದ್ಧಾನಂದಜೀಯವರ ಮೂಲಕ ತಿಳಿಸಿದರು. ಆಗ ಕರುಣಾಗೃಹ ಹಳೆಯ ಮನೆಯಲ್ಲಿತ್ತು. ಗುಯೆರಾ ಅಮೇರಿಕಾಕ್ಕೆ ಹೋದ ಮೇಲೆ ತಾವು ಭರವಸೆ ಕೊಟ್ಟಂತೆ ಧನಸಹಾಯವನ್ನು ಕಳುಹಿಸಿದರು. ಇಂದಿಗೂ ಅನಾ–ಗುಯೆರಾರವರ ಸಹಾಯದ ಸ್ಮರಣೆ ಅಚ್ಚಳಿಯದೆ ಉಳಿದಿದೆ. ಮುಂದೆ ಬೇರೆ ಬೇರೆ ಅಭಿಮಾನಿ–ದಾನಿಗಳು ಕೂಡ ಧನಸಹಾಯವನ್ನು ಮಾಡುತ್ತಾ ಬಂದರು. ಹೀಗೆ ಟ್ರಸ್ಟ್ ಸ್ವಯಂ ಪ್ರೇರಣೆಯಿಂದ ಬರುವ ಧನಸಹಾಯದಿಂದ ಬೆಳೆದು ಬರುತ್ತಿರುವಾಗ ಈ ಅಭಿಮಾನಿಗಳೆಲ್ಲರನ್ನು ಮೇಲುಕೋಟೆಗೆ ಬರಮಾಡಿಕೊಂಡು ಒಂದು ಸ್ನೇಹಮಿಲನ ಮಾಡಬೇಕೆಂಬ ವಿಚಾರ ಬಂದಿತು. ಅದರಂತೆ ೧೯೯೪–೯೫ ರ ಸುಮಾರಿನಲ್ಲಿ ಮೇಲುಕೋಟೆಯಲ್ಲಿ ಸ್ನೇಹಮಿಲನವನ್ನು ಏರ್ಪಡಿಸಲಾಯಿತು. ಈ ಸ್ನೇಹಮಿಲನಕ್ಕೆ ನೂರಾರು ಜನ ಅಭಿಮಾನಿಗಳು ಬೇರೆ ಬೇರೆ ಸ್ಥಳಗಳಿಂದ ಬಂದಿದ್ದರು. ಅನೇಕರು ಕುಟುಂಬ ಸಮೇತರಾಗಿ ಬಂದಿದ್ದರು. ಮೂರು ದಿನಗಳು ನಡೆದ ಈ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ನಡೆಯಿತು. ಬಂದಂಥ ಅಭಿಮಾನಿಗಳನ್ನು ಸೇರಿಸಿ ಬೇರೆ ಬೇರೆ ವಿಷಯಗಳನ್ನು ಕುರಿತು ವಿಚಾರ ಗೋಷ್ಠಿಗಳನ್ನು ಸಹ ಏರ್ಪಡಿಸಲಾಗಿತ್ತು. ಒಂದು ವಿಚಾರ ಗೋಷ್ಠಿಯ ಉದ್ಘಾಟನೆಯನ್ನು ಸಾಹಿತಿ ಡಾ॥ ಎಸ್.ಎಲ್. ಭೈರಪ್ಪನವರು ಮಾಡಿದ್ದರು. ಕರುಣಾಗೃಹ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತಲ್ಲದೆ ಎಲ್ಲರನ್ನೂ ಹೊಸ ಜೀವನ ದಾರಿ ಕೇಂದ್ರಕ್ಕೆ ಕರೆದುಕೊಂಡು ಹೋಗಲಾಗಿತ್ತು. ಹೀಗೆ ನಡೆದ ಸ್ನೇಹಮಿಲನವನ್ನು ಜ್ಞಾಪಿಸಿಕೊಳ್ಳುತ್ತಿರುವಂಥ ಅನೇಕ ಸ್ನೇಹಿತರು ಇನ್ನೂ ಇದ್ದಾರೆ. ಅವರೆಲ್ಲರೂ ಮುಂದಿನ ಸ್ನೇಹಮಿಲನದ ಬಗ್ಗೆ ವಿಚಾರಿಸುತ್ತಲೇ ಇರುತ್ತಾರೆ. ಸ್ನೇಹಮಿಲನಕ್ಕೆ ಮೊದಲು ಇನ್ನೊರ್ವ ಜಪಾನಿ ಯುವಕ ಟ್ರಸ್ಟ್‌ನಲ್ಲಿ ಸುಮಾರು ಒಂದು ವರ್ಷವಿದ್ದು ಸ್ವಯಂ ಸೇವಕನಾಗಿ ಕೆಲಸ ಮಾಡಿದ. ಈ ಅವಧಿಯಲ್ಲಿ ಅವನು ಸೊಗಸಾಗಿ ಕನ್ನಡ ಮಾತನಾಡುವುದನ್ನು ಕಲಿತನಲ್ಲದೆ ಬರೆಯುವುದನ್ನು ಕಲಿತ. ಅಷ್ಟೇ ಅಲ್ಲ ಆಗ ಟ್ರಸ್ಟ್ ನಡೆಸುತ್ತಿದ್ದ ಮುದ್ರಣಾಲಯದಲ್ಲಿ ಕನ್ನಡ ಕಂಪೋಸಿಂಗ್ ಮಾಡುವುದನ್ನು ಸಹ ಕಲಿತ. ಈತನ ಹೆಸರು ತೋಸಿಮಿಚಿ ಹಿರೋಸೆ. ಇವನು ೨೦ ವರ್ಷದ ಯುವಕ. ಇಂದಿಗೂ ಆತ ಟ್ರಸ್ಟ್‌ನ್ನು ಮರೆತಿಲ್ಲ.

ಆಗಾಗ್ಗೆ ಪತ್ರ ಬರೆಯುತ್ತಾನೆ.

ಹೀಗೆ ಟ್ರಸ್ಟ್ ತನ್ನ ನಾಲ್ಕೂವರೆ ದಶಕಗಳ ಕಳೆದುಹೋದ ಜೀವನದಲ್ಲಿ ಸ್ನೇಹಿತರ, ಅಭಿಮಾನಿಗಳ ಮತ್ತು ದಾನಿಗಳ ಸದ್ಭಾವನೆಯ ಸೌಗಂಧದಲ್ಲಿಯೆ ಬೆಳೆದು ಬಂದಿದೆ. ಆದರೆ ಯಾವುದೇ ಒಂದು ಸಂಸ್ಥೆಗೆ ಎಲ್ಲಕ್ಕಿಂತ ಹೆಚ್ಚು ನೆಮ್ಮದಿಯನ್ನು ತಂದುಕೊಡುವಂಥ ಸಂಗತಿಯೆಂದರೆ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಕೃತಜ್ಞತಾಭಾವದಿಂದಲೂ, ಅಭಿಮಾನದ ಮನೋಭಾವನೆಯಿಂದಲೂ ಟ್ರಸ್ಟಿನೊಂದಿಗೆ ಸಂಪರ್ಕವಿರಿಸಿಕೊಂಡಿರುವುದು. ಈ ವಿಚಾರದಲ್ಲಿ ಟ್ರಸ್ಟ್ ಭಾಗ್ಯಶಾಲಿ ಎಂದೇ ಹೇಳಬಹುದು. ಕರುಣಾಗೃಹದಲ್ಲಿ ಓದಿದ ಮಕ್ಕಳಾಗಲಿ, ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ಓದಿದ ಪ್ರೌಢಮಹಿಳೆಯರಾಗಲಿ, ಶ್ರೀ ಕೃಷ್ಣ ಶಿಶುವಿಹಾರದಲ್ಲಿದ್ದಂಥ ಮಕ್ಕಳಾಗಲಿ ಮತ್ತು ಮುಂದೆ ಜನಪದ ವಿದ್ಯಾಲಯದಲ್ಲಿ ಓದಿದ ಮಕ್ಕಳಾಗಲಿ ಟ್ರಸ್ಟಿನ ಬಗ್ಗೆ ವಿಶೇಷ ಮಮತೆಯನ್ನಿಟ್ಟುಕೊಂಡಿದ್ದಾರೆ.

ಟ್ರಸ್ಟಿನ ಈ ೪೫ ವರ್ಷಗಳ ಸೇವಾ ಜೀವನದಲ್ಲಿ ಯಾರೇ ಒಬ್ಬ ದಾನಿಯಾಗಲಿ, ಸಾರ್ವಜನಿಕ ವ್ಯಕ್ತಿಯಿಂದಾಗಲಿ, ಹಳೆಯ ವಿದ್ಯಾರ್ಥಿಯಿಂದಾಗಲಿ ಮೇಲುಕೋಟೆಯ ನಾಗರೀಕರಿಂದಾಗಲಿ ಟ್ರಸ್ಟಿನ ಬಗ್ಗೆ ಮತ್ತು ಅದರಲ್ಲಿ ತೊಡಗಿಸಿಕೊಂಡಿರುವ ಕಾರ್ಯಕರ್ತರ ಬಗ್ಗೆ ಅಪಸ್ವರ ಕೇಳಿ ಬಂದುದಿಲ್ಲ. ಹೀಗೆ ಟ್ರಸ್ಟಿನ ಜೀವನದ ೪೫ ವರ್ಷಗಳ ಸಿಂಹಾವಲೋಕನದಲ್ಲಿ ಕಂಡು ಬರುವುದು ಏರುವಿಕೆಯೇ ಹೊರತು ಇಳಿಯುವಿಕೆಯಲ್ಲ.

(ಮುಂದುವರಿಯುವುದು)

ಸನ್ಮಾನ್ಯರಿಂದ

'ಜನಪದ ವಿಚಾರ' ಕ್ಲುಪ್ತವಾಗಿ ಬರುತ್ತಿದೆ; ವಿಚಾರ ಪರಿಪುಲ್ಲತವಾಗಿ ಬರುತ್ತಿದೆ. ತುಂಬಾ ಸಂತೋಷ. ಗಾಂಧೀ-ಸರ್ವೋದಯ ವಿಚಾರವನ್ನು ಬೀರಲು ಇದೊಂದಾದರೂ ಸಾಧನ ಇರುವುದೇ ಆಶಾದಾಯಕ. ಅಕ್ಟೋಬರ್ ತಿಂಗಳ ಸಂಚಿಕೆ ಚಿಂತನಕ್ಕೆ ಸಾಕಷ್ಟು ಗ್ರಾಸ ಒದಗಿಸುತ್ತದೆ. ೧೨೩ ಅಣು ಒಪ್ಪಂದ, ಭೂಮಿ ಎಂಬ ಮಹಾಬೀಜ, ಪ್ಯಾರೇಲಾಲ್ ಈ ಲೇಖನಗಳೆಲ್ಲ ತುಂಬ ಉದ್ಬೋಧಕವಾಗಿವೆ. ನನಗೆ ಹಲವಾರು ವಿಚಾರ ತಿಳಿಸಿವೆ. ಪತ್ರಿಕೆ ಹೀಗೆಯೆ ಮುಂದುವರಿಯಲಿ, ಬಲಗೊಳ್ಳಲಿ. ನಿಮ್ಮ ಏಕಾಂಗಿ ಸಹಾಸ ಸಾರ್ಥಕವಾಗಲಿ ಎಂದು ನನ್ನ ಪ್ರಾರ್ಥನೆ.

- ನೀಲತ್ತಹಳ್ಳಿ ಕಸ್ತೂರಿ ಬೆಂಗಳೂರು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 5714
DTP Sanketh, Melkote. Printed at INDIVARA, Nagamangala Phone : 08236 – 298754 e-mail : janapada@yahoo.com